9. ಮಾರುತಿ ಓಮ್ನಿ ವಾಹನದ ನೋಂದಣಿ ಸಂಖ್ಯೆ: KA-02-M-3589 ವಾಹನವು ನ್ಯಾಯಾಲಯದ ಮುಂದೆ ಸುಮಾರು 09 ವರ್ಷಗಳ ಕಾಲ ನಿಲುಗಡೆಯಾಗಿರುವುದು ಅದರ ಶಿಥಿಲತೆಗೆ ಕಾರಣವಾಗಿ ವಾಹನದ ಸಂಪೂರ್ಣ ಮೌಲ್ಯವು ಇಳಿಕೆಯಾಗುವ ಸಾಧ್ಯತೆ ಇರುವ ಕಾರಣ, ಅರ್ಜಿದಾರರಿಗಾಗಲೀ ವಾಹನದ ಮಾಲೀಕರಾಗಲೀ ತಮ್ಮ ವಾಹನವನ್ನು ತಮ್ಮದೆಂದು ಹಾಗೂ ಮೇಲ್ಕಂಡ ಅಪರಾಧದಂತೆ ವಾಹನವು ಭಾಗಿಯಾಗಿಲ್ಲವೆಂದು ತಮ್ಮ ಪರ ಸಾಬೀತುಗೊಳಿಸಿಕೊಳ್ಳುವಂತಹ ಯಾವುದೇ ಅಹವಾಲನ್ನು ಮಾಡಲು ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಇನ್ನು ಹೆಚ್ಚಿನ ಸಮಯ ಕಾಯುವುದು ಸೂಕ್ತವಲ್ಲವೆಂದು ಪರಿಗಣಿಸಿ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ವಾಹನ ಸಂಖ್ಯೆ: KA-02-M-3589 ಹಾಗೂ ಒಟ್ಟು 410 ಕೆ.ಜಿ ತೂಕದ 15 ರಕ್ತ ಚಂದನದ ತುಂಡುಗಳನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಎ)ರ ವ್ಯಾಪ್ತಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುವುದು ಸೂಕ್ತವಾಗಿರುತ್ತದೆ ಎಂದು ಪರಿಗಣಿಸಲಾಯಿತು.

10. ಸರ್ಕಾರದ ಪರ ತನಿಖಾಧಿಕಾರಿಗಳು ಹಾಜರು ಪಡಿಸಿರುವ ವರದಿಗಳ ಆಧಾರದ ಮೇಲೆ, ಅಮಾನತ್ತು ಪಡಿಸಿಕೊಂಡ ಮಾರುತಿ ಓಮ್ನಿ ವಾಹನದ ನೋಂದಣಿ ಸಂಖ್ಯೆ: KA-02-M-3589 ರಲ್ಲಿ ಅಕ್ರಮವಾಗಿ ಒಟ್ಟು 410 ಕೆ.ಜಿ ತೂಕದ 15 ರಕ್ತ ಚಂದನದ ತುಂಡುಗಳನ್ನು ಸಾಗಣೆ ಮಾಡುತ್ತಿದ್ದ ರಕ್ತ ಚಂದನ ಅರಣ್ಯೋತ್ಪನ್ನದ ಮಾಲೀಕತ್ವವನ್ನು ಸಾಬೀತುಪಡಿಸುವ ಅಥವಾ ಜಪ್ತಾದ ವಾಹನವು ಸದರಿ ಕೃತ್ಯದಲ್ಲಿ ಭಾಗಿಯಾಗಿಲ್ಲವೆಂದು ಅಲ್ಲಗಳೆಯಲು ವಾಹನದ ನೋಂದಣಿ ಮಾಲೀಕರು ಅಥವಾ ಅವರ ಪರ ವಕೀಲರಿಗೆ ಸಾಕಷ್ಟು ಅವಕಾಶಗಳನ್ನು ನೀಡಿದ್ದರೂ ಸಹ ಈ ನ್ಯಾಯಾಲಯದ ಮುಂದೆ ಹಾಜರಾಗದೇ ಇರುವುದರಿಂದ ಸದರಿ ವಾಹನವು ಅರಣ್ಯೋತ್ಪನ್ನದ ಅಕ್ರಮ ಸಾಗಾಣಿಕೆಯಲ್ಲಿ ಭಾಗಿಯಾಗಿರುವುದಾಗಿ ಈ ನ್ಯಾಯಾಲಯಕ್ಕೆ ಮನದಟ್ಟಾಗಿರುತ್ತದೆ ಹಾಗೂ ಪ್ರಕರಣವು ತುಂಬ ಹಳೆಯ ಪ್ರಕರಣವಾದ್ದರಿಂದ, ಅಮಾನತ್ತು ಪಡಿಸಿಕೊಂಡ ವಾಹನವು ಶಿಥಿಲವಾಗಿ ವಾಹನದ ಮೌಲ್ಯವನ್ನು ಕಳೆದುಕೊಳ್ಳುವ ಕಾರಣದಿಂದಾಗಿ ಹಾಗೂ ಜಪ್ತಾದ

ರಕ್ತಚಂದನವು ಅರಣ್ಯ ಉತ್ಪನ್ನವಾದ ಕಾರಣ ಮೇಲ್ಕಂಡ 1 ರಿಂದ 4 ಅಂಶಗಳು ಸಕಾರಾತ್ಮಕವಾದವುಗಳಾಗಿದ್ದು, ಮೇಲ್ಕಂಡ ವಾಹನವು ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ಕರ್ನಾಟಕ ಅರಣ್ಯ ನಿಯಮ 1969ರ ಉಲ್ಲಂಘನೆ ಮಾಡಿರುವುದು ಅಭಿಯೋಜನೆ ಪರ ತನಿಖಾಧಿಕಾರಿಗಳು ಸಲ್ಲಿಸಿರುವ ವರದಿಗಳಿಂದಾಗಿ ಸಂಶಯಾತೀತವಾಗಿ ಸಾಬೀತಾಗಿರುತ್ತದೆ.

11. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ (1) ಮೇರೆಗೆ ಅರಣ್ಯೋತ್ಪನ್ನವಾದ ರಕ್ತ ಚಂದನ ಮರದ ಒಟ್ಟು 410 ಕೆ.ಜಿ ತೂಕದ 15 ರಕ್ತ ಚಂದನದ ತುಂಡುಗಳನ್ನು ಮಾರುತಿ ಓಮ್ನಿ ವಾಹನದ ನೋಂದಣಿ ಸಂಖ್ಯೆ: KA-02-M-3589 ರಲ್ಲಿ ಪರವಾನಗಿ ಇಲ್ಲದೆ ಸಾಗಿಸಿ ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ 24, 62, 80, ಕರ್ನಾಟಕ ಅರಣ್ಯ ನಿಯಮ- 1969 ರ ಕಲಂ 144, 145, ಜೊತೆಗೆ ಭಾರತೀಯ ದಂಡ ಸಂಹಿತೆ 1860 ರ ಕಲಂ 379 ರ ಉಲ್ಲಂಘನೆ ಮಾಡಿರುವ ಕಾರಣಕ್ಕೆ ಅನುಗೊಂಡನಹಳ್ಳಿ ಪೋಲೀಸ್ ಠಾಣೆ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು ಜಪ್ತಾದ ಮುದ್ದೆಮಾಲನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಹಾಜರುಪಡಿಸಿದ್ದು, ಅಂತಹ ಸ್ವತ್ತನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕಾನೂನಿನಡಿ ಅವಕಾಶವಿರುವ ಮೇರೆಗೆ ಸದರಿ ಪ್ರಕರಣದಲ್ಲಿ ಒಳಗೊಂಡಿರುವ ರಕ್ತ ಚಂದನದ ತುಂಡುಗಳನ್ನು ಹಾಗೂ ವಾಹನವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆಯೆಂದು ಮನಗಂಡು ಈ ಕೆಳಕಂಡಂತೆ.

ಆದೇಶ

ನಾನು ಡಾ. ಸಂತೋಷ ಕುಮಾರ್ ಜಿ., ಭಾ.ಅ.ಸೇ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ (ಅನುಗೊಂಡನಹಳ್ಳಿ ಪೊಲೀಸ್ ಠಾಣೆ ಕ್ರೈಂ ನಂ. 09/2017 ದಿ:17.01.2017) ರಲ್ಲಿ ಒಳಗೊಂಡಿರುವ ಮಾರುತಿ ಓಮ್ನಿ ವಾಹನದ ನೋಂದಣಿ ಸಂಖ್ಯೆ: KA-02-M-3589 ವಾಹನ ಹಾಗೂ ಒಟ್ಟು 410 ಕೆ.ಜಿ ತೂಕದ 15 ರಕ್ತ ಚಂದನದ ತುಂಡುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:04-04-2026 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಲಾಗಿದೆ.
`ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಅಧಿಕೃತ ಅಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ಗ್ರಾಮಾಂತರ ವಿಭಾಗ,
ದೇವನಹಳ್ಳಿ,

PR-679

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ

ಹೊಸಕೋಟೆ ಪೊಲೀಸ್ ಠಾಣೆಯ ಕ್ಯೆಂ ನಂ.45/2020 ದಿನಾಂಕ: 07.02.2020

ಡಿ.ಎಫ್.ಓ.ಸಿ ಸಂಖ್ಯೆ:02/2020

ಉಪಸ್ಥಿತರು : ಡಾ. ಸಂತೋಷ್ ಕುಮಾರ್.ಜಿ ಭಾ.ಅ.ಸೇ.. ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ.

ಪಿರ್ಯಾದಿ : ಆರಕ್ಷಕ ಉಪ ನಿರೀಕ್ಷಕರು, ಹೊಸಕೋಟೆ ಪೊಲೀಸ್ ಠಾಣೆ, ಹೊಸಕೋಟೆ ಉಪವಿಭಾಗ. (ಇವರ ಪರ ಸರ್ಕಾರದ ಕಾನೂನು ಅಧಿಕಾರಿ ಕಿರಿಯ ರವರು)

ಎದುರುದಾರರು: 1) ಶ್ರೀ ಆಸೀಫ್ ಎ ಬಿನ್ ಬೀರನ್, 32 ವರ್ಷ, ಡ್ರೈವರ್ ಕೆಲಸ ಸ್ವಂತ ವಿಳಾಸ:ಅಡಕತ್ ಬೈಲ್, ಚೂರಿ ಹೌಸ್, ಆರ್.ಡಿ.ನಗರ್, ಕೂಡ್ಲೂ, ಕಾಸರಗೋಡ್ ಕೇರಳ-671124

2) ಶ್ರೀ ಸಮೀರ್ ಎ.ವೈ ಬಿನ್ ಎ.ಎಂ ಯೂಸೂಫ್. 35 ವರ್ಷ, ಮುಸ್ಲಿಂ ಜನಾಂಗ, ಡ್ರೈವರ್ ಕೆಲಸ, ವಾಸ: ನಂ.19/260ಎ, ಬಿಸ್ಮಿಲ್ಲಾ ಮಂಜಿಲ್, ನ್ಯಾಷನಲ್ ನಗರ್, ಉಲಿಯತಡಕ, ಸಿರಿಬಾಗಿಲು ಪೋಸ್ಟ್, ಕಾಸರಗೋಡ್ ಕೇರಳ-671124

3) ಶ್ರೀ ಸಲ್ಮಾನ್ ಬೆಂಗಳೂರು

4) ಶ್ರೀ ನಾಸಿರ್ @ ಹಾಜಿಸಾಬ್, ಆಂಜಿನಪ್ಪ ಗಾರ್ಡನ್, ಚಾಮರಾಜಪೇಟೆ ಬೆಂಗಳೂರು.

5) ಶ್ರೀ ಹಮೀದ್ ಬೊಮ್ಮನಹಳ್ಳಿ, ಬೆಂಗಳೂರು.

6) ಶ್ರೀ ಬಾಬು ತಿರುಪತ್ತೂರು, ಕೃಷ್ಣ ಗಿರಿ, ತಮಿಳುನಾಡು.

4) Sri. MOHAMAD SHAREEF S/o ABDULLA, No 277 Pipe Lane, T Dasarahalli, Bangalore-560057 Ph No:9884739997

****

ಪ್ರಕರಣದ ಮುಖ್ಯಾಂಶಗಳು:-

1. ದಿನಾಂಕ:07/02/2020 ರಂದು ಆರಕ್ಷಕ ಉಪ ನಿರೀಕ್ಷಕರು, ಹೊಸಕೋಟೆ ಪೊಲೀಸ್ ಠಾಣೆ ರವರು ಹಾಜರುಪಡಿಸಿದ ವರದಿಯಲ್ಲಿ "ಈ ದಿವಸ ಮಧ್ಯಾಹ್ನ ಸುಮಾರು 12-00 ಗಂಟೆಯಲ್ಲಿ ನಾನು ಪೊಲೀಸ್ ಠಾಣೆಯಲ್ಲಿದ್ದಾಗ ಮಾಲೂರು ಕಡೆಯಿಂದ ಬೆಂಗಳೂರು ಕಡೆಗೆ KA-10-A-0969 ರ ಈಚರ್ ಕ್ಯಾಂಟರ್ ನಲ್ಲಿ ಅಕ್ರಮವಾಗಿ ಯಾವುದೇ ಪರವಾನಗಿ ಇಲ್ಲದೆ ರಕ್ತ ಚಂದನ ಮರದ ತುಂಡುಗಳನ್ನು ಸಾಗಿಸುತ್ತಿರುವುದಾಗಿ ನನಗೆ ಬಂದ ಖಚಿತ ಮಾಹಿತಿಯನ್ನು ಹೊಸಕೋಟೆ ಉಪ ವಿಭಾಗದ ಡಿವೈಎಸ್ ಪಿ ರವರಾದ ಶ್ರೀ ಎನ್.ಬಿ ಸಕ್ರಿ ಸಾಹೇಬರವರಿಗೆ ವಿಚಾರ ತಿಳಿಸಿದೆ. ಪಂಚಾಯ್ತುದಾರರನ್ನು ಹಾಗೂ ಪೊಲೀಸ್ ಸಿಬ್ಬಂದಿಗಳೊಂದಿಗೆ ಪೊಲೀಸ್ ಜೀಪಿನಲ್ಲಿ ಠಾಣೆಯಿಂದ ಹೋಗಿ ಕೋಲಾರ-ಬೆಂಗಳೂರು ಎನ್ ಹೆಚ್-75 ರಸ್ತೆ, ಹೊಸಕೋಟೆ ಲ್ಯಾಂಕೋ ಟೋಲ್ ಬಳಿ ಕಾಯುತ್ತಿದ್ದಾಗ, ಮಧ್ಯಾಹ್ನ 12-30 ಗಂಟೆಗೆ ಹೊಸಕೋಟೆ ಕಡೆಯಿಂದ ಬರುತ್ತಿದ್ದ KA-10-A-0969 ಈಚರ್ ಕ್ಯಾಂಟರ್ ನ್ನು ನೋಡಿ ನಾವು ನಿಲ್ಲಿಸುವಂತೆ ಸೂಚಿದೆವು ಕ್ಯಾಂಟರ್ ವಾಹನದಲ್ಲಿ ಇಬ್ಬರು ಆಸಾಮಿಗಳಿದ್ದು ಅವರನ್ನು ವಶಕ್ಕೆ ಪಡೆದು ಕ್ಯಾಂಟರ್ ಹಿಂಬದಿಯ ಬಾಡಿಯಲ್ಲಿ ನೋಡಲಾಗಿ ರಕ್ತ ಚಂದನ ಮರಗಳನ್ನು ಲೋಡ್ ಮಾಡಿರುವುದು ಕಂಡು ಬಂದ ಕಾರಣ ಸ್ಥಳದಲ್ಲಿದ್ದ ಪಂಚರ ಸಮಕ್ಷಮ ಆಸಾಮಿಗಳ ಹೆಸರು ವಿಳಾಸ ಕೇಳಲಾಗಿ 1. ಶ್ರೀ ಆಸೀಫ್ ಎ ಬಿನ್ ಬೀರನ್, 32 ವರ್ಷ, ಮುಸ್ಲಿಂ ಜನಾಂಗ, ಡ್ರೈವರ್ ಕೆಲಸ ಸ್ವಂತ ವಿಳಾಸ:ಭಾವಮುಂಜಿಲ್, ಬಂದರು ಆಳಕ್ಕೆ ರಸ್ತೆ, ಶಾಹಿನ್ ಅನಾಥಶ್ರಮ ಹತ್ತಿರ, ಮಂಗಳೂರು ಟೌನ್, ಹಾಲಿ ವಾಸ:ಅಡಕತ್ ಬೈಲ್, ಚೂರಿ ಹೌಸ್, ಆರ್.ಡಿ.ನಗರ್ (ರಾಮ್ ದಾಸ್ ನಗರ್) ಪೋಸ್ಟ್, ಕೂಡ್ಲೂ, ಕಾಸರಗೋಡ್ ಕೇರಳ-671124 (ಆಧಾರ್ ನಂ.694852230450). 2. ಶ್ರಿ. ಸಮೀರ್ ಎ.ವೈ ಬಿನ್ ಎ.ಎಂ ಯೂಸೂಫ್. 35 ವರ್ಷ, ಮುಸ್ಲಿಂ ಜನಾಂಗ, ಡ್ರೈವರ್ ಕೆಲಸ, ವಾಸ: ನಂ.19/260ಎ, ಬಿಸ್ಮಿಲ್ಲಾ ಮಂಜಿಲ್, ನ್ಯಾಷನಲ್ ನಗರ್, ಜೈ ಮಾತಾ ಸ್ಕೂಲ್ ಹತ್ತಿರ, ಉಲಿಯತಡಕ, ಸಿರಿಬಾಗಿಲು ಪೋಸ್ಟ್, ಕಾಸರಗೋಡ್ ಕೇರಳ-671124 (ಆಧಾರ್ ನಂ.953751626169). ಎಂದು ತಿಳಿಸಿದರು ಮಾಲನ್ನು ಸಾಗಾಣಿಕೆ ಮಾಡುತ್ತಿರುವ ಬಗ್ಗೆ ವಿಚಾರ ಮಾಡಲಾಗಿ ಸಲ್ಮಾನ್ ಎಂಬುವರು ದಿನಾಂಕ:06/02/2020 ರಂದು

ನಮ್ಮನ್ನು ನೆಲಮಂಗಲ ಬೈಪಾಸ್ ಗೆ KA-10-A-0969 ಈಚರ್ ಕ್ಯಾಂಟರ್ ವಾಹನವನ್ನು ನಾವಿದ್ದಲ್ಲಿಗೆ ಡ್ರೈವರ್ ಜೊತೆ ಕಳುಹಿಸಿದರು, ನಾವಿಬ್ಬರು ಕೃಷ್ಣಗಿರಿಗೆ ಹೋಗಿ ಸಲ್ಮಾನ್ ಗೆ ಫೋನ್ ಮಾಡಿದೆವು, ಅಲ್ಲಿಗೆ ಕಾರಿನಲ್ಲಿ ಒಬ್ಬ ವ್ಯಕ್ತಿ ಬಂದು ಬಾಬು ತಿರುಪತ್ತೂರ್ ವಾಸಿ ಅಂತ ಪರಿಚಯ ಮಾಡಿಕೊಂಡು ಕಾರಿನಲ್ಲಿ ನಮ್ಮನ್ನು ಬಿಟ್ಟು ನಾವು ತಂದಿದ್ದ ಕ್ಯಾಂಟರ್ ತೆಗೆದುಕೊಂಡು ಹೋದನು. ಈ ದಿನ ಬೆಳಗಿನ ಜಾವ 3-00 ಗಂಟೆಗೆ ಬಂದು ವಾಪಸ್ ಕ್ಯಂಟರ್ ನ್ನು ನಮಗೆ ಕೊಟ್ಟು ಇದರಲ್ಲಿರುವ ರಕ್ತ ಚಂದನದ ತುಂಡುಗಳನ್ನು ಬೆಂಗಳೂರು ನಗರ, ಚಾಮರಾಜಪೇಟೆಯ ಆಂಜಿನಪ್ಪ ಗಾರ್ಡನ್, ವಾಸಿ ನಾಸಿರ್ @ ಹಾಜಿಸಾಬ್ ಮತ್ತು ಹಮೀದ್ ರವರಿಗೆ ಕೊಡಲು ಹೋಗುತ್ತಿರುವುದಾಗಿ ತಿಳಿಸಿದರು. ನಂತರ ನಾವು ಸದರಿ ಕ್ಯಾಂಟರ್ ವಾಹನವನ್ನು ಪರಿಶೀಲಿಸಲಾಗಿ KA-10-A-0969 EICHER CANTER, 3013 MODEL, ಆಗಿದ್ದು ಕಂದು ಬಣ್ಣದ್ದಾಗಿರುತ್ತೆ, ಹಿಂಭಾಗದ ಬಾಡಿಯಲ್ಲಿ ರಕ್ತ ಚಂದನದ ತುಂಡುಗಳನ್ನು ತುಂಬಿ ಟಾರ್ ಪಲ್ ಕಟ್ಟಿರುತ್ತೆ. ಸ್ಥಳಕ್ಕೆ ಸ್ಕೇಲ್ ಟೇಪ್ ತರಿಸಿಕೊಂಡು ಪಂಚರ ಸಮಕ್ಷಮ ಅವುಗಳನ್ನು ಹೊರಗೆ ತೆಗೆದು ನೋಡಲಾಗಿ ಒಟ್ಟು 29 ರಕ್ತ ಚಂದನ ಮರದ ತುಂಡುಗಳಿದ್ದು, ಸದರಿ 29 ರಕ್ತ ಚಂದನದ ತುಂಡುಗಳನ್ನುತೂಕ ಮಾಡಲಾಗಿ ಒಟ್ಟು 900 ಕೆ.ಜಿ ಇದ್ದು ಅವುಗಳ ಅಂದಾಜು ಬೆಲೆ 45 ಲಕ್ಷ ರೂ ಹಾಗೂ ಸಾಗಾಣಿಕೆಗೆ ಬಳಸಲಾದ ವಾಹನದ ಬೆಲೆ 15 ಲಕ್ಷ ರೂಗಳು ಒಟ್ಟು 60 ಲಕ್ಷ ರೂಗಳಾಗುತ್ತೆಂದು ಪಂಚಾಯ್ತುದಾರರು ಅಭಿಪ್ರಾಯ ಪಟ್ಟಿರುತ್ತಾರೆ. ಪಂಚರ ಸಮಕ್ಷಮ ಮಧ್ಯಾಹ್ನ 1-00 ರಿಂದ 3-00 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ, ಸದರಿ 29 ರಕ್ತ ಚಂದನದ ತುಂಡುಗಳನ್ನು ಮತ್ತು ಸಾಗಾಣಿಕೆ ಬಳಸಿದ KA-10-A-0969 ಈಚರ್ ಕ್ಯಾಂಟರ್ ವಾಹನವನ್ನು ಅಮಾನತ್ತು ಪಡಿಸಿಕೊಂಡು ಠಾಣೆಗೆ ಬಂದು ಠಾಣೆಯ ಎಸ್.ಎಚ್.ಓ ರವರಿಗೆ ಪ್ರಕರಣವನ್ನು ದಾಖಲಿಸುವಂತೆ ವರದಿಯನ್ನು ನೀಡಿರುತ್ತೇನೆ. ಅದರಂತೆ ಎಸ್.ಎಚ್.ಓ ಹೊಸಕೋಟೆ ಪೊಲೀಸ್ ಠಾಣೆ ಇವರು ಠಾಣಾ ಮೊಕದ್ದಮೆ ಸಂಖ್ಯೆ:45/2020 ಅನ್ನು ಕಲಂ 24, 62, 104 ಕರ್ನಾಟಕ ಅರಣ್ಯ ಕಾಯ್ದೆ-1963, ಮತ್ತು ಕರ್ನಾಟಕ ಅರಣ್ಯ ಅಧಿನಿಯಮ 1969 ರ ಕಲಂ 144, 145 ಜೊತೆಗೆ 379 ಐ.ಪಿ.ಸಿ ರೀತ್ಯಾ ಪ್ರಕರಣವನ್ನು ದಾಖಲಿಸಿರುತ್ತಾರೆ". ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963 ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಆರಕ್ಷಕ ಉಪ ನಿರೀಕ್ಷಕರು, ಹೊಸಕೋಟೆ ಪೊಲೀಸ್ ಠಾಣೆ ಇವರು ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ರವರಿಗೆ ವಿನಂತಿಸಿರುತ್ತಾರೆ. ಅದರಂತೆ ಹೊಸಕೋಟೆ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ:45/2020 ರ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಳ್ಳಲಾದ ವಾಹನದ ಸಂಖ್ಯೆ: KA-10-A-0969 ಈಚರ್ ಕ್ಯಾಂಟರ್ ವಾಹನವನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71(ಎ) ಅಡಿಯಲ್ಲಿ ಕ್ರಮ ಜರುಗಿಸಲು ಈ ನ್ಯಾಯಾಲಯದಲ್ಲಿ ವಿನಂತಿಸಿರುತ್ತಾರೆ.

2. ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ ವಾಹನದ ನೋಂದಣಿ ಸಂಖ್ಯೆ: KA-10-A-0969 ಈಚರ್ ಕ್ಯಾಂಟರ್ ವಾಹನದ 'B' Extract, Sri. MOHAMAD SHAREEF S/o ABDULLA, No 277 Pipe Lane, T Dasarahalli, Bangalore-560057 Ph No:9884739997 ರವರ ಹೆಸರಿನಲ್ಲಿ ನೊಂದಣಿಯಾಗಿರುವುದು ಕಂಡುಬಂದಿರುತ್ತದೆ. ಜಪ್ತು ವಾಹನದ ಮಾಲೀಕರಿಗೆ ಕರ್ನಾಟಕ ಅರಣ್ಯ ಕಾಯಿದೆ 1963ರ ಕಲಂ 71(ಬಿ) ರಡಿ ಕಾರಣ ಕೇಳುವ ನೋಟೀಸನ್ನು ದಿನಾಂಕ: 10.03.2026, 26.03.2026, ಹಾಗೂ ಅಂತಿಮ ನೋಡೀಸನ್ನು 10.04.2026, ರಂದು ನೀಡಲಾಗಿರುತ್ತದೆ. ಆದರೆ ಸದರಿಯವರು ಯಾವುದೇ ದಿನಾಂಕಗಳಂದು ವಿಚಾರಣೆಗೆ ಹಾಜರಾಗಿರುವುದಿಲ್ಲ.

3. ನ್ಯಾಯಾಲಯವು, ಹೊಸಕೋಟೆ ಪೊಲೀಸ್ ಠಾಣೆಯ ತನಿಖಾಧಿಕಾರಿಗಳು, ಹಾಜರು ಪಡಿಸಿರುವ ದಾಖಲಾತಿಗಳನ್ನು ಹಾಗೂ ವರದಿಯನ್ನು ಪರಿಶೀಲಿಸಿರುತ್ತದೆ. ವರದಿಗಳ ಪ್ರಕಾರ ಮೇಲ್ಕಂಡ ವಾಹನವು ಕೃತ್ಯದಲ್ಲಿ ಬಾಗಿಯಾಗಿರುವುದು ಮೇಲ್ನೋಟಕ್ಕೆ ದೃಢಪಟ್ಟ ಕಾರಣ, ಅಭಿಯೋಜನಾ ಪರ ಸಾಕ್ಷಿಗಳ ವಿಚಾರಣೆಗಾಗಿ ಶ್ರೀ. ರಘು @ ರಾಘವೇಂದ್ರ ಬಿನ್ ಲೇಟ್ ರಾಮಕೃಷ್ಣಪ್ಪ ಮತ್ತು ಶ್ರೀ. ಯಲ್ಲಪ್ಪ ಬಿನ್ ಲೇಟ್ ಚಂದ್ರಪ್ಪ ಪಂಚಸಾಕ್ಷಿದಾರರಿಗೆ ಹಾಗೂ ಪಿರ್ಯಾದುದಾರರಾದ ಶ್ರೀ. ರಾಜು ಸಿ.ಎಂ ಆರಕ್ಷಕ ಉಪ ನಿರೀಕ್ಷಕರು, ಹೊಸಕೋಟೆ ಪೊಲೀಸ್ ಠಾಣೆ ರವರಿಗೆ ಸಮನ್ಸ್ ನೀಡಿ ವಿಚಾರಣೆಗಾಗಿ ನ್ಯಾಯಾಲಯಕ್ಕೆ

ಹಾಜರಾಗುವಂತೆ ತಿಳಿಸಿದ್ದರೂ ಕೂಡ ಕೂಡ ಸದರಿಯವರು ಗೈರುಹಾಜರಾದ ಕಾರಣ ಸದರಿಯವರನ್ನು ವಿಚಾರಣೆಯಿಂದ ಕೈ ಬಿಡಲಾಗಿರುತ್ತದೆ. ವಾಹನದ ಮಾಲೀಕರಿಗೆ ಪುನಃ ನೋಟೀಸ್ ನೀಡಿದ್ದರೂ ಕೂಡ ಯಾವುದೇ ಪ್ರಯೋಜವಾಗುವುದಿಲ್ಲವೆಂದು ಮನಗಂಡು ಮುಂದಿನ ಕ್ರಮ ಕೈಗೊಳ್ಳಲಾಗಿರುತ್ತದೆ.

4. ಪ್ರಕರಣದ ವಾಸ್ತವಾಂಶ ಮತ್ತು ಕಾನೂನಿನ ವಸ್ತುಸ್ಥಿತಿ ಹಾಗೂ ಲಭ್ಯವಿದ್ದ ವಿಷಯ ಸಾಮಗ್ರಿಗಳನ್ನು ಗಮನಿಸಿ ಪರಿಗಣಿಸಬೇಕಾದ ಅಂಶಗಳು ಈ ಕೆಳಗಿನಂತೆ ಇರುತ್ತದೆ.

1. ಈಚರ್ ಕ್ಯಾಂಟರ್ ವಾಹನದ ನೋಂದಣಿ ಸಂಖ್ಯೆ: KA-10-A-0969 ಯನ್ನು ಬಳಿಸಿ ಒಟ್ಟು 900 ಕೆಜಿ ತೂಕವುಳ್ಳ 29 ರಕ್ತ ಚಂದನ ಮರದ ತುಂಡುಗಳನ್ನು ಅಕ್ರಮವಾಗಿ ಸಾಗಿಸುತ್ತಿರುವುದು ಕಾನೂನು ವಿರುದ್ಧವಾಗಿ ಅರಣ್ಯ ಕಾಯ್ದೆ ನಿಯಮಗಳನ್ನು ಉಲ್ಲಂಘಿಸಲಾಗಿದೆಯೇ?
2. ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಬಿ) (1)ರ ಪ್ರಕಾರ ವಾಹನದ ಮಾಲೀಕರಿಗೆ ಕಾರಣ ಕೇಳುವ ನೋಟೀಸ್ ನೀಡಲಾಗಿದೆಯೇ? ಹಾಗೂ ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು /ಸಮರ್ಥಿಸಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಲಾಗಿದೆಯೇ?
3. ಪ್ರಕರಣದಲ್ಲಿ ಅಮಾನತ್ತುಪಡಿಸಿದ ಒಟ್ಟು 900 ಕೆಜಿ ತೂಕವುಳ್ಳ 29 ರಕ್ತ ಚಂದನ ತುಂಡುಗಳನ್ನು ಅರಣ್ಯ ಸ್ವತ್ತು ಎಂದು ಅರಣ್ಯ ಕಾಯ್ದೆಯಡಿ ಸರ್ಕಾರಕ್ಕೆ ಸೇರಿದ್ದು ಎಂಬುದಾಗಿ ಅಭಿಯೋಜನೆ ರುಜುವಾತು ಪಡಿಸಿದೆಯೇ?
4. ಅಮಾನತ್ತುಗೊಂಡು ವಾಹನ ಮತ್ತು ಅರಣ್ಯೋತ್ಪನ್ನ ಸರ್ಕಾರಕ್ಕೆ 'ಮುಟ್ಟುಗೋಲು' ಹಾಕಿಕೊಳ್ಳಬಹುದೇ?
5. ಯಾವ ಆದೇಶ ಅಥವಾ ತೀರ್ಪು?

ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.
ಅಂಶ 01 ಮತ್ತು 02 : ಸಕಾರಾತ್ಮಕವಾಗಿದೆ.
ಅಂಶ 03 ಮತ್ತು 04 : ಸಕಾರಾತ್ಮಕವಾಗಿದೆ.
ಅಂಶ 05 : ಅಂತಿಮ ಆದೇಶ ಈ ಕೆಳಕಂಡ ಕಾರಣಗಳಿಗಾಗಿ

ಕಾರಣಗಳು

ಅಂಶ 01 ರಿಂದ 04 ಒಂದಕ್ಕೊಂದು ಪರಸ್ಪರ ಸಂಬಂಧಿಸಿದ್ದು, ಕಾರಣ ವಾಸ್ತವಾಂಶದ ಪುನರಾವರ್ತನೆಯನ್ನು ತಡೆಯಲು ಒಟ್ಟಾಗಿ ಚರ್ಚಿಸಲಾಗಿದೆ.

5. ದಿನಾಂಕ:07.02.2020 ರಂದು ಹೊಸಕೋಟೆ ಪೊಲೀಸ್ ಠಾಣೆ ವ್ಯಾಪ್ತಿಯ ಕೋಲಾರ-ಬೆಂಗಳೂರು ಎನ್ ಹೆಚ್-75 ರಸ್ತೆ, ಹೊಸಕೋಟೆ ಲ್ಯಾಂಕೋ ಟೋಲ್ ಬಳಿ ಈಚರ್ ಕ್ಯಾಂಟರ್ ವಾಹನದಲ್ಲಿ ಇಬ್ಬರು ಆಸಾಮಿಗಳು ರಕ್ತ ಚಂದನ ಮರದ ತುಂಡುಗಳನ್ನು ಅಕ್ರಮವಾಗಿ ಕಳ್ಳತನದಿಂದ ಸಾಗಣೆ ಮಾಡುತ್ತಿರುವ ಆರೋಪದ ಮೇಲೆ ಹೊಸಕೋಟೆ ಪೊಲೀಸ್ ಠಾಣೆಯಿಂದ ಮಾಲು ಮತ್ತು ಸಾಗಾಣಿಕೆಗೆ ಬಳಸಿದ ವಾಹನವನ್ನು ಜಪ್ತು ಪಡಿಸಿ ಪ್ರಕರಣ ದಾಖಲಿಸಿಕೊಂಡಿರುತ್ತಾರೆ. ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963 ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಹೊಸಕೋಟೆ ಪೊಲೀಸ್ ಠಾಣೆ ಇವರು ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ರವರಿಗೆ ವಿನಂತಿಸಿರುತ್ತಾರೆ. ಅದರಂತೆ ಹೊಸಕೋಟೆ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ:45/2020 ದಿನಾಂಕ:07.02.2020 ರ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಳ್ಳಲಾದ ಮುದ್ದೆಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಎ) ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ರವರು ಈ ನ್ಯಾಯಾಲಯದಲ್ಲಿ ವಿನಂತಿಸಿರುತ್ತಾರೆ.

6. ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಎ) ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ, ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ಇವರು ಈ ನ್ಯಾಯಾಲಯದಲ್ಲಿ ವಿನಂತಿಸಿಕೊಂಡಿರುವ ವರದಿಗಳನ್ನು ಪರಿಶೀಲಿಸಿ ವಾಹನದ ಮಾಲೀಕರಿಗೆ ಹಲವಾರು ಬಾರಿ ನೋಟೀಸ್ ಜಾರಿ ಮಾಡಿ ತಮ್ಮ ಅಹವಾಲನ್ನು ಹೇಳಿಕೊಳ್ಳಲು

ಸಾಕಷ್ಟು ಕಾಲಾವಕಾಶ ನೀಡಿದ್ದರೂ ಕೂಡ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ವಾಹನದ ಮಾಲೀಕರಾಗಲೀ ಅಥವಾ ಚಾಲಕರಾಗಲೀ ಕೂಡ ನ್ಯಾಯಾಲಯಕ್ಕೆ ಹಾಜರಾಗಿ ತನ್ನ ಪರ ಅಹವಾಲನ್ನು ನೀಡಿರುವುದಿಲ್ಲ ಹಾಗೂ ಅಮಾನತ್ತು ಪಡಿಸಿಕೊಂಡಿರುವ ವಾಹನದಲ್ಲಿನ ರಕ್ತ ಚಂದನದ ತುಂಡುಗಳ ಸಾಗಾಣಿಕೆಯ ಬಗ್ಗೆ ಯಾವುದೇ ಅಹವಾಲನ್ನು ಹಾಗೂ ಪರವಾನಿಗೆಯ ಬಗ್ಗೆ ವಾಹನದ ಮಾಲೀಕರಿಂದಾಗಲೀ/ ಚಾಲಕರಿಂದಾಗಲೀ ಸಮರ್ಥನೆ ಇರುವುದಿಲ್ಲ.

7. ಮೇಲ್ಕಂಡ ಕಾರಣಗಳಿಂದಾಗಿ ಹಾಗೂ ಅಮಾನತ್ತು ಪಡಿಸಿಕೊಂಡಿರುವ. ಈಚರ್ ಕ್ಯಾಂಟರ್ ವಾಹನದ ನೋಂದಣಿ ಸಂಖ್ಯೆ: KA-10-A-0969 ರಲ್ಲಿ ಒಟ್ಟು 900 ಕೆ.ಜಿ ತೂಕವುಳ್ಳ 29 ರಕ್ತ ಚಂದನ ಮರದ ತುಂಡುಗಳನ್ನು ಸಾಗಿಸುತ್ತಿರುವುದು ಕಾನೂನು ವಿರುದ್ಧವಾಗಿ ಅರಣ್ಯ ಕಾಯ್ದೆ ನಿಯಮಗಳನ್ನು ಉಲ್ಲಂಘಿಸಿರುವುದು ದೃಢಪಟ್ಟಿರುತ್ತದೆ. ಮೇಲ್ಕಂಡ ದಿನಾಂಕಗಳಂತೆ ವಾಹನದ ಮಾಲೀಕರಿಗೆ ನೋಟೀಸ್ ನೀಡಿ ತಮ್ಮ ಅಹವಾಲನ್ನು ತೋಡಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಿದ್ದರೂ ಕೂಡ ಅವರು ಗೈರುಹಾಜರಾದ ಕಾರಣ ಪುನಃ ನೋಟೀಸ್ ನೀಡುವುದು ಪ್ರಯೋಜನವಿಲ್ಲವೆಂದು ಪರಿಗಣಿಸಲಾಯಿತು.

8. ಈಚರ್ ಕ್ಯಾಂಟರ್ ವಾಹನದ ನೋಂದಣಿ ಸಂಖ್ಯೆ: KA-10-A-0969 ವಾಹನವು ನ್ಯಾಯಾಲಯದ ಮುಂದೆ ಸುಮಾರು 6 ವರ್ಷಗಳ ಕಾಲ ನಿಲುಗಡೆಯಾಗಿರುವುದು ಅದರ ಶಿಥಿಲತೆಗೆ ಕಾರಣವಾಗಿ ವಾಹನದ ಸಂಪೂರ್ಣ ಮೌಲ್ಯವು ಇಳಿಕೆಯಾಗುವ ಸಾಧ್ಯತೆ ಇರುವ ಕಾರಣ, ಅರ್ಜಿದಾರರಿಗಾಗಲೀ ವಾಹನದ ಮಾಲೀಕರಾಗಲೀ ತಮ್ಮ ವಾಹನವನ್ನು ತಮ್ಮದೆಂದು ಹಾಗೂ ಮೇಲ್ಕಂಡ ಅಪರಾಧದಂತೆ ವಾಹನವು ಬಾಗಿಯಾಗಿಲ್ಲವೆಂದು ತಮ್ಮ ಪರ ಸಾಬೀತುಗೊಳಿಸಿಕೊಳ್ಳುವಂತಹ ಯಾವುದೇ ಅಹವಾಲನ್ನು ಮಾಡಲು ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಇನ್ನು ಹೆಚ್ಚಿನ ಸಮಯ ಕಾಯುವುದು ಸೂಕ್ತವಲ್ಲವೆಂದು ಪರಿಗಣಿಸಿ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ವಾಹನ ಸಂಖ್ಯೆ: KA-10-A-0969 ಹಾಗೂ 29 ರಕ್ತ ಚಂದನ ಮರದ ತುಂಡುಗಳನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಎ)ರ ವ್ಯಾಪ್ತಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುವುದು ಸೂಕ್ತವಾಗಿರುತ್ತದೆ ಎಂದು ಪರಿಗಣಿಸಲಾಯಿತು.

9. ಸರ್ಕಾರದ ಪರ ತನಿಖಾಧಿಕಾರಿಗಳು ಹಾಜರು ಪಡಿಸಿರುವ ವರದಿಗಳ ಆಧಾರದ ಮೇಲೆ, ಅಮಾನತ್ತು ಪಡಿಸಿಕೊಂಡ ಈಚರ್ ಕ್ಯಾಂಟರ್ ವಾಹನದ ನೋಂದಣಿ ಸಂಖ್ಯೆ: KA-10-A-0969 ರಲ್ಲಿ ಅಕ್ರಮವಾಗಿ ಒಟ್ಟು 900 ಕೆಜಿ ತೂಕವುಳ್ಳ 29 ರಕ್ತ ಚಂದನ ಮರದ ತುಂಡುಗಳನ್ನು ಸಾಗಣೆ ಮಾಡುತ್ತಿದ್ದ ರಕ್ತ ಚಂದನ ಅರಣ್ಯೋತ್ಪನ್ನದ ಮಾಲೀಕತ್ವವನ್ನು ಸಾಬೀತುಪಡಿಸುವ ಅಥವಾ ಜಪ್ತಾದ ವಾಹನವು ಸದರಿ ಕೃತ್ಯದಲ್ಲಿ ಭಾಗಿಯಾಗಿಲ್ಲವೆಂದು ಅಲ್ಲಗಳೆಯಲು ವಾಹನದ ನೋಂದಣಿ ಮಾಲೀಕರು ಅಥವಾ ಅವರ ಪರ ವಕೀಲರಿಗೆ ಸಾಕಷ್ಟು ಅವಕಾಶಗಳನ್ನು ನೀಡಿದ್ದರೂ ಸಹ ಈ ನ್ಯಾಯಾಲಯದ ಮುಂದೆ ಹಾಜರಾಗದೇ ಇರುವುದರಿಂದ ಸದರಿ ವಾಹನವು ಅರಣ್ಯೋತ್ಪನ್ನದ ಅಕ್ರಮ ಸಾಗಾಣಿಕೆಯಲ್ಲಿ ಭಾಗಿಯಾಗಿರುವುದಾಗಿ ಈ ನ್ಯಾಯಾಲಯಕ್ಕೆ ಮನದಟ್ಟಾಗಿರುತ್ತದೆ ಹಾಗೂ ಪ್ರಕರಣವು ತುಂಬ ಹಳೆಯ ಪ್ರಕರಣವಾದ್ದರಿಂದ, ಅಮಾನತ್ತು ಪಡಿಸಿಕೊಂಡ ವಾಹನವು ಶಿಥಿಲವಾಗಿ ವಾಹನದ ಮೌಲ್ಯವನ್ನು ಕಳೆದುಕೊಳ್ಳುವ ಕಾರಣದಿಂದಾಗಿ ಹಾಗೂ ಜಪ್ತಾದ ರಕ್ತ ಚಂದನವು ಅರಣ್ಯ ಉತ್ಪನ್ನವಾದ ಕಾರಣ ಮೇಲ್ಕಂಡ 1 ರಿಂದ 4 ಅಂಶಗಳು ಸಕಾರಾತ್ಮಕವಾದವುಗಳಾಗಿದ್ದು, ಮೇಲ್ಕಂಡ ವಾಹನವು ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ಕರ್ನಾಟಕ ಅರಣ್ಯ ನಿಯಮ 1969ರ ಉಲ್ಲಂಘನೆ ಮಾಡಿರುವುದು ಅಭಿಯೋಜನೆ ಪರ ತನಿಖಾಧಿಕಾರಿಗಳು ಸಲ್ಲಿಸಿರುವ ವರದಿಗಳಿಂದಾಗಿ ಸಂಶಯಾತೀತವಾಗಿ ಸಾಬೀತಾಗಿರುತ್ತದೆ.

10. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71(ಎ) (1) ಮೇರೆಗೆ ರಾಜ್ಯ ಸರ್ಕಾರ ಸ್ವತ್ತಾದ ಒಟ್ಟು 900 ಕೆಜಿ ತೂಕವುಳ್ಳ 29 ರಕ್ತ ಚಂದನ ಮರದ ತುಂಡುಗಳನ್ನು ಮತ್ತು ಈಚರ್ ಕ್ಯಾಂಟರ್ ವಾಹನದ ನೋಂದಣಿ ಸಂಖ್ಯೆ: KA-10-A-0969 ರಲ್ಲಿ ರಕ್ತ ಚಂದನ ಮರದ ತುಂಡುಗಳನ್ನು ಪರವಾನಗಿ ಇಲ್ಲದೆ ಸಾಗಿಸಿ ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ಕರ್ನಾಟಕ ಅರಣ್ಯ ಅಧಿನಿಯಮ 1969ರ ನಿಯಮಗಳನ್ನು ಉಲ್ಲಂಘನೆ ಮಾಡಿರುವ ಕಾರಣಕ್ಕೆ ಹೊಸಕೋಟೆ ಪೋಲೀಸ್ ಠಾಣೆ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು ಜಪ್ತಾದ ಮುದ್ದೆಮಾಲನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಹಾಜರುಪಡಿಸಿದ್ದು, ಅಂತಹ ಸ್ವತ್ತನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕಾನೂನಿನಡಿ ಅವಕಾಶವಿರುವ ಮೇರೆಗೆ ಸದರಿ ಪ್ರಕರಣದಲ್ಲಿ ಒಳಗೊಂಡಿರುವ ಒಟ್ಟು 900 ಕೆಜಿ ತೂಕವುಳ್ಳ 29 ರಕ್ತ ಚಂದನ ಮರದ ತುಂಡುಗಳನ್ನು ಹಾಗೂ ವಾಹನವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆಯೆಂದು ಮನಗಂಡು ಅಂಶ 05 ಈ ಕೆಳಕಂಡಂತೆ.

ಆದೇಶ

ನಾನು ಡಾ. ಸಂತೋಷ ಕುಮಾರ್ ಜಿ, ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ, ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71(ಎ) ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ (ಹೊಸಕೋಟೆ ಪೊಲೀಸ್ ಠಾಣೆ ಕ್ರೈಂ ನಂ.45/2020 ದಿನಾಂಕ:07.02.2020) ರಲ್ಲಿ ಒಳಗೊಂಡಿರುವ ಈಚರ್ ಕ್ಯಾಂಟರ್ ವಾಹನದ ನೋಂದಣಿ ಸಂಖ್ಯೆ: KA-10-A-0969 ವಾಹನ ಹಾಗೂ ಒಟ್ಟು 900 ಕೆಜಿ ತೂಕವುಳ್ಳ 29 ರಕ್ತ ಚಂದನ ಮರದ ತುಂಡುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:27-04-2026 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಲಾಗಿದೆ.

'ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ'.

ಅಧಿಕೃತ ಅಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ಗ್ರಾಮಾಂತರ ವಿಭಾಗ,
ದೇವನಹಳ್ಳಿ,

PR-680

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ

ಸೂಲಿಬೆಲೆ ಪೊಲೀಸ್ ಠಾಣೆಯ ಕ್ರೈಂ ನಂ.92/2019 ದಿನಾಂಕ: 28.09.2019
ಡಿ.ಎಫ್.ಓಸಿ ಸಂಖ್ಯೆ:22/2019

ಉಪಸ್ಥಿತರು : ಡಾ. ಸಂತೋಷ್ ಕುಮಾರ್.ಜಿ., ಭಾ.ಅ.ಸೇ. ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ

ಪಿರ್ಯಾದಿ: ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಸೂಲಿಬೆಲೆ ಪೊಲೀಸ್ ಠಾಣೆ. (ಇವರ ಪರ ಸರ್ಕಾರದ ಕಾನೂನು ಅಧಿಕಾರಿ ಕಿರಿಯ ರವರು)

ಎದುರುದಾರರು :1) ಶ್ರೀ ಸುಲ್ತಾನ್ ಬಿನ್ ದಸ್ತಗಿರ್ 25 ವರ್ಷ ಡ್ರೈವರ್ ಕೆಲಸ, ಮದೀನ ನಗರ್, ಬೊಮ್ಮನಹಳ್ಳಿ, ಬೆಂಗಳೂರು.

2) ಶ್ರೀ ರವಿ ಕುಮಾರ್ ಬಿನ್ ಅದಿಮುಲಂ 30 ವರ್ಷ ಕೂಲಿ ಕೆಲಸ, ಕಳಸಪಾಡಿ ಗ್ರಾಮ, ಧರ್ಮಪುರಿ ಜಿಲ್ಲೆ, ತಮಿಳುನಾಡು.
3) ಶ್ರೀ ಮೋಹನ, ಹೊಸೂರು ಧರ್ಮಪುರಿ, ತಮಿಳುನಾಡು.

* * * * * *

ಪ್ರಕರಣದ ಮುಖ್ಯಾಂಶಗಳು:-

1. ದಿನಾಂಕ 28/09/2019 ರಂದು ಆರಕ್ಷಕ ಉಪ ನಿರೀಕ್ಷಕರು, ಕಾ&ಸು ರವರು ಹಾಜರುಪಡಿಸಿದ ವರದಿಯಲ್ಲಿ "ಈ ದಿನ ನಾನು ಠಾಣೆಯಲ್ಲಿದ್ದಾಗ ಮಧ್ಯಾಹ್ನ 12-30 ಗಂಟೆಗೆ ಹೊಸಕೋಟೆ ಉಪ ವಿಭಾಗದ ಡಿ.ವೈ.ಎಸ್.ಪಿ ರವರು ದೂರವಾಣಿ ಕರೆಮಾಡಿ ಹೊಸಕೋಟೆ-ದೇವನಹಳ್ಳಿ ರಸ್ತೆಯಲ್ಲಿ ಒಂದು ಕಾರಿನಲ್ಲಿ ರಕ್ತ ಚಂದನ ಮರದ ತುಂಡುಗಳನ್ನು ಸಾಗಾಣಿಕೆಯಾಗುತ್ತಿದೆ ಅಂತ ಮಾಹಿತಿ ಇರುತ್ತೆ ಹೋಗಿ ದಾಳಿ ಮಾಡಿ ಅಮಾನತ್ತು ಪಡಿಸಿಕೊಳ್ಳಿ ಅಂತ ತಿಳಿಸಿದ್ದರ ಮೇರೆಗೆ ನಾನು ಸಿಬ್ಬಂದಿಗಳೊಂದಿಗೆ ಸರ್ಕಾರಿ ಜೀಪ್ ನಲ್ಲಿ ಹೋಗಿ ಸೂಲಿಬೆಲೆಯ ದೇವನಹಳ್ಳಿ ಸರ್ಕಲ್ ಬಳಿ ಜೀಪನ್ನು ಮುಖ್ಯ ರಸ್ತೆಯಲ್ಲಿ ನಿಲ್ಲಿಸಿಕೊಂಡು ಬಂದು ಹೋಗುವ ವಾಹನಗಳನ್ನು ತಪಾಸಣೆ ಮಾಡುತ್ತಿದ್ದಾಗ ದೇವನಹಳ್ಳಿ ಕಡೆಯಿಂದ ಹೊಸಕೋಟೆ ಕಡೆಗೆ ಹೋಗಲು ಬರುತ್ತಿದ್ದ ಬಿಳಿಬಣ್ಣದ ಇನೋವಾ ಕಾರೊಂದು ಅತಿರಭಸವಾಗಿ ಬರುತ್ತಿದ್ದ ಕಾರನ್ನು ಅಡ್ಡಹಾಕಿ ನಿಲ್ಲಿಸುವಂತೆ ಸೂಚಿಸಿದರೂ ಸಹ ಚಾಲಕ ತನ್ನ ಕಾರನ್ನ ನಿಲ್ಲಿಸದೆ ಚಾಲನೆ ಮಾಡಿಕೊಂಡು ಜೋರಾಗಿ ಹೋಗುತ್ತಿದ್ದವನನ್ನ ಹಿಂಬಾಲಿಸಿಕೊಂಡು ಹೋಗಿ ಬೆನ್ನಟ್ಟಿ ಹೊಸಕೋಟೆ ದೇವನಹಳ್ಳಿ ಎನ್.ಹೆಚ್.207 ರಸ್ತೆ ಸೂಲಿಬೆಲೆ ಕೆರೆ ಏರಿಯ ಬಳಿ ಕಾರನ್ನ ಮಧ್ಯಾಹ್ನ 1-30 ಗಂಟೆಗೆ ಅಡ್ಡಹಾಕಿ ತಡೆದು ನಿಲ್ಲಿಸಿದಾಗ ಕಾರಿನಲ್ಲಿದ್ದ 3 ಜನ ಓಡಿ ಹೋಗಲು ಪ್ರಯತ್ನಿಸಿದರು ಆಗ 3 ಜನರ ಪೈಕಿ ಇಬ್ಬರನ್ನು ನಾನು ಮತ್ತು ಸಿಬ್ಬಂದಿ ಹಿಡಿದುಕೊಂಡಾಗ ಮತ್ತೊಬ್ಬ ಓಡಿಹೋದ ಇಬ್ಬರ ಹೆಸರು ವಿಳಾಸ ವಿಚಾರಿಸಲಾಗಿ 1) ಶ್ರೀ ಸುಲ್ತಾನ್ ಬಿನ್ ದಸ್ತಗಿರ್ 25 ವರ್ಷ ಡ್ರೈವರ್ ಕೆಲಸ, ಮದೀನ ನಗರ್, ಬೊಮ್ಮನಹಳ್ಳಿ, ಬೆಂಗಳೂರು. 2) ಶ್ರೀ ರವಿ ಕುಮಾರ್ ಬಿನ್ ಅದಿಮುಲಂ 30 ವರ್ಷ ಕೂಲಿ ಕೆಲಸ, ಕಳಸಪಾಡಿ ಗ್ರಾಮ, ಧರ್ಮಪುರಿ ಜಿಲ್ಲೆ, ತಮಿಳುನಾಡು. ಓಡಿ ಹೋದವನ ಬಗ್ಗೆ ವಿಚಾರಿಸಲಾಗಿ ಹೊಸೂರಿನ ಮೋಹನ ಅಂತ ತಿಳಿಸಿ ಕಾರಿನಲ್ಲಿ ಎನಿದೆ ಅಂತ ಕೇಳಿದಾಗ ಆಂಧ್ರ ಪ್ರದೇಶದಿಂದ ರಕ್ತ ಚಂದನ ಮರದ ತುಂಡುಗಳನ್ನು ಕಾರಿನಲ್ಲಿ ತುಂಬಿಕೊಂಡು ದೇವನಹಳ್ಳಿ ಸೂಲಿಬೆಲೆ ಮಾರ್ಗವಾಗಿ ಹೊಸೂರ್ ನಲ್ಲಿ ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿದ್ದುದಾಗಿ ತಿಳಿಸಿದರು. ಆಗ ಕಾರ್ ನಂಬರ್ ನೋಡಲಾಗಿ KA-04-MF-5220 ರ ಬಿಳಿಬಣ್ಣದ ಇನೋವ ಕಾರಾಗಿರುತ್ತದೆ, ಕಾರಿನ ಡೋರ್ ತೆಗೆದು ನೋಡಲಾಗಿ ಒಳಗೆ ರಕ್ತ ಚಂದನದ ತುಂಡುಗಳಂತೆ ಮೇಲ್ ನೋಟಕ್ಕೆ ಕಂಡುಬಂದಿರುತ್ತದೆ. ಸ್ಥಳಕ್ಕೆ ಅಳತೆ ಟೇಪ್ ಮತ್ತು ಸ್ಕೇಲ್ ತರಿಸಿಕೊಂಡು ಹಾಗೂ ಪಂಚಾಯ್ತಿದಾರರನ್ನು ಕರೆಸಿಕೊಂಡು ಪಂಚರ ಸಮಕ್ಷಮ ರಕ್ತ ಚಂದನ ಮರದ ತುಂಡುಗಳನ್ನು ಹೊರಗೆ ತೆಗೆದು ಪರಿಶೀಲಿಸಲಾಗಿ ಒಟ್ಟು 20 ರಕ್ತ ಚಂದನ ಮರದ ತುಂಡುಗಳಿದ್ದು ಅವುಗಳನ್ನು ತೂಕ ಮಾಡಲಾಗಿ ಸದರಿ 20 ರಕ್ತ ಚಂದನ ತುಂಡುಗಳ ಒಟ್ಟು ತೂಕ 661 ಕೆ.ಜಿ ಇರುತ್ತದೆ. ಸದರಿ ರಕ್ತ ಚಂದನ ಮರದ ತುಂಡುಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಅಕ್ರಮವಾಗಿ ಕಳ್ಳತನದಿಂದ ಕಾರಿನಲ್ಲಿ ಸಾಗಾಣಿಕೆ ಮಾಡುತ್ತಿರುವುದು ಕಂಡುಬಂದಿರುತ್ತದೆ. ಮಧ್ಯಾಹ್ನ 2-00 ಗಂಟೆಯಿಂದ ಸಂಜೆ 4-50 ಗಂಟೆವರೆಗೆ ಪಂಚನಾಮೆಯನ್ನು ಪಂಚರ ಸಮಕ್ಷಮ ಬರೆದುಕೊಂಡು ಸದರಿ 20 ರಕ್ತ ಚಂದನ ಮರದ ತುಂಡುಗಳನ್ನು ಹಾಗೂ ಇನೋವಾ ಕಾರನ್ನು ಅಮಾನತ್ತು ಪಡಿಸಿಕೊಂಡು ಠಾಣೆಗೆ ಹಿಂದಿರುಗಿ ಆರೋಪಿಗಳ ವಿರುದ್ಧ ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ 24,62,80 ಕರ್ನಾಟಕ ಅರಣ್ಯ ನಿಯಮ-1969 ರ ಕಲಂ 144,145 ಜೊತೆಗೆ ಭಾರತೀಯ ದಂಡ ಸಂಹಿತೆ 1860ರ ಕಲಂ 379 ರ ಉಲ್ಲಂಘನೆಯ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಲು ಠಾಣಾಧಿಕಾರಿಗಳಿಗೆ ವರದಿಯನ್ನು ನೀಡಲಾಗಿ ಸದರಿ ಆರೋಪಿಗಳ ವಿರುದ್ಧ ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ 24,62,80 ಕರ್ನಾಟಕ ಅರಣ್ಯ ನಿಯಮ-1969 ರ ಕಲಂ 144,145 ಜೊತೆಗೆ ಭಾರತೀಯ ದಂಡ ಸಂಹಿತೆ 1860ರ ಕಲಂ 379 ರ ಉಲ್ಲಂಘನೆಯ ಅಡಿಯಲ್ಲಿ ಅಪರಾಧ ಸಂಖ್ಯೆ 92/2019 ನ್ನು ದಿನಾಂಕ:28.09.2019 ರಂದು ದಾಖಲಿಸಲಾಗಿರುತ್ತದೆ"

ಹಾಗೂ ಮುಂದಿನ ಕ್ರಮಕ್ಕಾಗಿ ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ರವರಿಗೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಸೂಲಿಬೆಲೆ ಪೊಲೀಸ್ ಠಾಣೆ ಇವರು ಹಸ್ತಾಂತರಿಸಿದ್ದು, ಸದರಿ ಪ್ರಕರಣದಲ್ಲಿ ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71ಎ ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ಇವರು ಈ ನ್ಯಾಯಾಲಯದಲ್ಲಿ ವಿನಂತಿಸಿರುತ್ತಾರೆ.

2. ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ ನೊಂದಣಿ ಸಂಖ್ಯೆ KA-04-MF-5220 ರ ಇನೋವ ಕಾರಿನ 'B' Extract ಸಾರಿಗೆ ಅಧಿಕಾರಿಗಳಿಂದ ಪಡೆಯಲಾಗಿದ್ದು, ಸದರಿ ಕಾರಿನ ಆರ್.ಟಿ.ಓ ದಾಖಲೆಗಳಲ್ಲಿ Mr. SALEEM BASHA B S/o BABUSAHEB, No.2228 AMC 1ST MN RD 5TH CRS, KUSHALNAGAR, KADGONDANAHALLI, BANGALORE, Karnataka. ರವರ ಹೆಸರಿನಲ್ಲಿ ನೊಂದಣಿಯಾಗಿರುವುದು ಕಂಡುಬಂದಿರುತ್ತದೆ. ಅದರಂತೆ ಆರೋಪಿತ ವಾಹನ ಮಾಲೀಕರ ಮೇಲ್ಕಂಡ ಹೆಸರಿನ ವಿಳಾಸಕ್ಕೆ ದಿನಾಂಕ: 04.03.2026, 24.03.2026 ಹಾಗೂ ಅಂತಿಮ ನೋಟೀಸ್ 07.04.2026 ರಂದು ನೀಡಲಾಗಿರುತ್ತದೆ. ಆದರೆ ಸದರಿಯವರು ಯಾವುದೇ ದಿನಾಂಕಗಳಂದು ವಿಚಾರಣೆಗೆ ಹಾಜರಾಗಿರುವುದಿಲ್ಲ.

3. ನ್ಯಾಯಾಲಯವು, ಸೂಲಿಬೆಲೆ ಪೊಲೀಸ್ ಠಾಣೆಯ ತನಿಖಾಧಿಕಾರಿಗಳು, ಹಾಜರು ಪಡಿಸಿರುವ ದಾಖಲಾತಿಗಳನ್ನು ಹಾಗೂ ವರದಿಯನ್ನು ಪರಿಶೀಲಿಸಿರುತ್ತದೆ. ವರದಿಗಳ ಪ್ರಕಾರ ಮೇಲ್ಕಂಡ ವಾಹನವು ಕೃತ್ಯದಲ್ಲಿ ಬಾಗಿಯಾಗಿರುವುದು ಮೇಲ್ನೋಟಕ್ಕೆ ದೃಢಪಟ್ಟ ಕಾರಣ, ಅಭಿಯೋಜನಾ ಪರ ಸಾಕ್ಷಿಗಳ ವಿಚಾರಣೆಗಾಗಿ ಶ್ರೀ. ಆಶೋಕ್ ಬಿನ್ ಮುನಿಯಪ್ಪ ಮತ್ತು ಶ್ರೀ ಶಿವಕುಮಾರ್ ಬಿನ್ ಸೀನಪ್ಪ ಪಂಚಸಾಕ್ಷಿದಾರರಿಗೆ ಹಾಗೂ ಪಿರ್ಯಾದುದಾರರಾದ ಶ್ರೀ. ಬಿ.ಎಂ ಗೋವಿಂದ, ಆರಕ್ಷಕ ಉಪ ನಿರೀಕ್ಷಕರು, ಸೂಲಿಬೆಲೆ ಪೊಲೀಸ್ ಠಾಣೆ (ಪ್ರಸ್ತುತ ಅನುಗೊಂಡನಹಳ್ಳಿ ಪೊಲೀಸ್ ಠಾಣೆ) ರವರಿಗೆ ಸಮನ್ಸ್ ನೀಡಿ ವಿಚಾರಣೆಗಾಗಿ ನ್ಯಾಯಾಲಯಕ್ಕೆ ಹಾಜರಾಗುವಂತೆ ತಿಳಿಸಿದ್ದರೂ ಕೂಡ ಸದರಿಯವರು ಗೈರುಹಾಜರಾದ ಕಾರಣ ಸದರಿಯವರನ್ನು ವಿಚಾರಣೆಯಿಂದ ಕೈ ಬಿಡಲಾಗಿರುತ್ತದೆ. ವಾಹನದ ಮಾಲೀಕರಿಗೆ ಪುನಃ ನೋಟೀಸ್ ನೀಡಿದ್ದರೂ ಕೂಡ ಯಾವುದೇ ಪ್ರಯೋಜನವಾಗುವುದಿಲ್ಲವೆಂದು ಮನಗಂಡು ಮುಂದಿನ ಕ್ರಮ ಕೈಗೊಳ್ಳಲಾಗಿರುತ್ತದೆ.

4. ಪ್ರಕರಣದ ವಾಸ್ತವಾಂಶ ಮತ್ತು ಕಾನೂನಿನ ವಸ್ತುಸ್ಥಿತಿ ಹಾಗೂ ಲಭ್ಯವಿದ್ದ ವಿಷಯ ಸಾಮಗ್ರಿಗಳನ್ನು ಗಮನಿಸಿ ಪರಿಗಣಿಸಬೇಕಾದ ಅಂಶಗಳು ಈ ಕೆಳಗಿನಂತೆ ಇರುತ್ತದೆ.

1. ಇನೋವಾ ವಾಹನದ ನೊಂದಣಿ ಸಂಖ್ಯೆ KA-04-MF-5220 ರಲ್ಲಿ ಒಟ್ಟು 661 ಕೆ.ಜಿ ತೂಕವುಳ್ಳ 20 ರಕ್ತ ಚಂದನ ಮರದ ತುಂಡುಗಳನ್ನು ಸಾಗಿಸುತ್ತಿರುವುದು ಕಾನೂನು ವಿರುದ್ಧವಾಗಿ ಅರಣ್ಯ ಕಾಯ್ದೆ / ನಿಯಮಗಳನ್ನು ಉಲ್ಲಂಘಿಸಲಾಗಿದೆಯೇ?
2. ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71ಬಿ (1)ರ ಪ್ರಕಾರ ವಾಹನಗಳ ಮಾಲೀಕರಿಗೆ ಕಾರಣ ಕೇಳುವ ನೋಟೀಸ್ ನೀಡಲಾಗಿದೆಯೇ? ಹಾಗೂ ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು / ಸಮರ್ಥಿಸಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಲಾಗಿದೆಯೇ?
3. ಪ್ರಕರಣದಲ್ಲಿ ಅಮಾನತ್ತುಪಡಿಸಿದ 661 ಕೆ.ಜಿ ತೂಕವುಳ್ಳ 20 ರಕ್ತ ಚಂದನ ಮರದ ತುಂಡುಗಳನ್ನು ಅರಣ್ಯ ಸ್ವತ್ತು ಎಂದು ಅರಣ್ಯ ಕಾಯ್ದೆಯಡಿ ಸರ್ಕಾರಕ್ಕೆ ಸೇರಿದ್ದು ಎಂಬುದಾಗಿ ಅಭಿಯೋಜನ ರುಜುವಾತು ಪಡಿಸಿದೆಯೇ?
4. ಅಮಾನತ್ತುಗೊಂಡು ವಾಹನ ಮತ್ತು ಅರಣ್ಯೋತ್ಪನ್ನ ಸರ್ಕಾರಕ್ಕೆ 'ಮುಟ್ಟುಗೋಲು ಹಾಕಿಕೊಳ್ಳಬಹುದೇ?

5. ಯಾವ ಆದೇಶ ಅಥವಾ ತೀರ್ಪು ?

ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ 1 ಮತ್ತು 2 : ಸಕಾರಾತ್ಮಕವಾಗಿದೆ.

ಅಂಶ 3 ಮತ್ತು 4 : ಸಕಾರಾತ್ಮಕವಾಗಿದೆ.

ಅಂಶ 5: ಅಂತಿಮ ಆದೇಶ ಈ ಕೆಳಕಂಡ ಕಾರಣಗಳಿಗಾಗಿ

<u>ಕಾರಣಗಳು</u>

ಅಂಶ 01 ರಿಂದ 04 ಒಂದಕ್ಕೊಂದು ಪರಸ್ಪರ ಸಂಬಂಧಿಸಿದ್ದು, ಕಾರಣ ವಾಸ್ತವಾಂಶದ ಪುನರಾವರ್ತನೆಯನ್ನು ತಡೆಯಲು ಒಟ್ಟಾಗಿ ಚರ್ಚಿಸಲಾಗಿದೆ.

5. ದಿನಾಂಕ 28.09.2019 ರಂದು ಪಿರ್ಯಾದುದಾರರಿಗೆ ಮಧ್ಯಾಹ್ನ 12-30 ಗಂಟೆಗೆ ಹೊಸಕೋಟೆ ಉಪ ವಿಭಾಗದ ಡಿ.ವೈ.ಎಸ್.ಪಿ ರವರು ದೂರವಾಣಿ ಕರೆಮಾಡಿ ಹೊಸಕೋಟೆ-ದೇವನಹಳ್ಳಿ ರಸ್ತೆಯಲ್ಲಿ ಒಂದು ಕಾರಿನಲ್ಲಿ ರಕ್ತ ಚಂದನ ಮರದ ತುಂಡುಗಳನ್ನು ಸಾಗಾಣಿಕೆಯಾಗುತ್ತಿದೆ ಅಂತ ಮಾಹಿತಿ ನೀಡಿದ್ದ ಮೇರೆಗೆ ಶ್ರೀ. ಬಿ.ಎಂ ಗೋವಿಂದ, ಆರಕ್ಷಕ ಉಪ ನಿರೀಕ್ಷಕರು, ಕಾ&ಸು ರವರು ಸಿಬ್ಬಂದಿಗಳೊಂದಿಗೆ ಸೂಲಿಬೆಲೆಯ ದೇವನಹಳ್ಳಿ ಸರ್ಕಲ್ ಬಳಿ ಜೀಪನ್ನು ಮುಖ್ಯ ರಸ್ತೆಯಲ್ಲಿ ನಿಲ್ಲಿಸಿಕೊಂಡು ಬಂದು ಹೋಗುವ ವಾಹನಗಳನ್ನ ತಪಾಸಣೆ ಮಾಡುತ್ತಿದ್ದಾಗ ದೇವನಹಳ್ಳಿ ಕಡೆಯಿಂದ ಹೊಸಕೋಟೆ ಕಡೆಗೆ ಹೋಗಲು ಬರುತ್ತಿದ್ದ ಬಿಳಿಬಣ್ಣದ ಇನೋವಾ ಕಾರನ್ನು ಅಡ್ಡಹಾಕಿ ನಿಲ್ಲಿಸುವಂತೆ ಸೂಚಿಸಿದಾಗ ಚಾಲಕ ಕಾರನ್ನ ನಿಲ್ಲಿಸದೆ ಚಾಲನೆ ಮಾಡಿಕೊಂಡು ಜೋರಾಗಿ ಹೋಗುತ್ತಿದ್ದವನನ್ನ ಹಿಂಬಾಲಿಸಿಕೊಂಡು ಹೋಗಿ ಹೊಸಕೋಟೆ ದೇವನಹಳ್ಳಿ ಎನ್.ಹೆಚ್.207 ರಸ್ತೆ ಸೂಲಿಬೆಲೆ ಕೆರೆ ಏರಿಯ ಬಳಿ ಕಾರನ್ನ ಅಡ್ಡಹಾಕಿ ತಡೆದು ಪರಿಶೀಲಿಸಲಾಗಿ KA-04-MF-5220 ರ ಬಿಳಿಬಣ್ಣದ ಇನೋವ ಕಾರಾಗಿರುತ್ತದೆ, ಕಾರಿನಲ್ಲಿ ಒಟ್ಟು 661 ಕೆ.ಜಿ ತೂಕದ 20 ರಕ್ತ ಚಂದನದ ತುಂಡುಗಳನ್ನು ಅಕ್ರಮವಾಗಿ ಕಳ್ಳತನದಿಂದ ಸಾಗಾಣಿಕೆ ಮಾಡುತ್ತಿರುವುದು ಕಂಡುಬಂದಿರುತ್ತದೆ. KA-04-MF-5220 ನೋಂದಣಿಯ ಇನೋವ ಕಾರನ್ನು ಮತ್ತು ಒಟ್ಟು 661 ಕೆ.ಜಿ ತೂಕದ 20 ರಕ್ತ ಚಂದನದ ತುಂಡುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಾಗಿ ವರದಿ ನೀಡಿರುತ್ತಾರೆ.

6. ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಎ) ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ, ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ಇವರು ಈ ನ್ಯಾಯಾಲಯದಲ್ಲಿ ವಿನಂತಿಸಿಕೊಂಡಿರುವ ವರದಿಗಳನ್ನು ಪರಿಶೀಲಿಸಿ ವಾಹನದ ಮಾಲೀಕರಿಗೆ ಹಲವಾರು ಬಾರಿ ನೋಟೀಸ್ ಜಾರಿ ಮಾಡಿ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಿದ್ದರೂ ಕೂಡ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ವಾಹನದ ಮಾಲೀಕರಾಗಲೀ ಅಥವಾ ಚಾಲಕರಾಗಲೀ ಕೂಡ ನ್ಯಾಯಾಲಯಕ್ಕೆ ಹಾಜರಾಗಿ ತನ್ನ ಪರ ಅಹವಾಲನ್ನು ನೀಡಿರುವುದಿಲ್ಲ ಹಾಗೂ ಅಮಾನತ್ತು ಪಡಿಸಿಕೊಂಡಿರುವ ವಾಹನದಲ್ಲಿನ ರಕ್ತ ಚಂದನದ ತುಂಡುಗಳ ಸಾಗಾಣಿಕೆಯ ಬಗ್ಗೆ ಯಾವುದೇ ಅಹವಾಲನ್ನು ಹಾಗೂ ಪರವಾನಿಗೆಯ ಬಗ್ಗೆ ವಾಹನದ ಮಾಲೀಕರಿಂದಾಗಲೀ/ ಚಾಲಕರಿಂದಾಗಲೀ ಸಮರ್ಥನೆ ಇರುವುದಿಲ್ಲ.

7. ಮೇಲ್ಕಂಡ ಕಾರಣಗಳಿಂದಾಗಿ ಹಾಗೂ ಅಮಾನತ್ತು ಪಡಿಸಿಕೊಂಡಿರುವ. ಇನೋವಾ ವಾಹನದ ನೊಂದಣಿ ಸಂಖ್ಯೆ KA-04-MF-5220 ರಲ್ಲಿ ಒಟ್ಟು 661 ಕೆ.ಜಿ ತೂಕವುಳ್ಳ 20 ರಕ್ತ ಚಂದನ ಮರದ ತುಂಡುಗಳನ್ನು ಸಾಗಿಸುತ್ತಿರುವುದು ಕಾನೂನು ವಿರುದ್ಧವಾಗಿ ಅರಣ್ಯ ಕಾಯ್ದೆ ನಿಯಮಗಳನ್ನು

ಉಲ್ಲಂಘಿಸಿರುವುದು ದೃಢಪಟ್ಟಿರುತ್ತದೆ. ಮೇಲ್ಕಂಡ ದಿನಾಂಕಗಳಂತೆ ವಾಹನದ ಮಾಲೀಕರಿಗೆ ನೋಟೀಸ್ ನೀಡಿ ತಮ್ಮ ಅಹವಾಲನ್ನು ತೋಡಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಿದ್ದರೂ ಕೂಡ ಅವರು ಗೈರುಹಾಜರಾದ ಕಾರಣ ಪುನಃ ನೋಟೀಸ್ ನೀಡುವುದು ಪ್ರಯೋಜನವಿಲ್ಲವೆಂದು ಪರಿಗಣಿಸಲಾಯಿತು.

8. ಇನೋವಾ ವಾಹನದ ನೊಂದಣಿ ಸಂಖ್ಯೆ KA-04-MF-5220 ವಾಹನವು ನ್ಯಾಯಾಲಯದ ಮುಂದೆ ಸುಮಾರು 07 ವರ್ಷಗಳ ಕಾಲ ನಿಲುಗಡೆಯಾಗಿರುವುದು ಅದರ ಶಿಥಿಲತೆಗೆ ಕಾರಣವಾಗಿ ವಾಹನದ ಸಂಪೂರ್ಣ ಮೌಲ್ಯವು ಇಳಿಕೆಯಾಗುವ ಸಾಧ್ಯತೆ ಇರುವ ಕಾರಣ, ಅರ್ಜಿದಾರರಿಗಾಗಲೀ ವಾಹನದ ಮಾಲೀಕರಾಗಲೀ ತಮ್ಮ ವಾಹನವನ್ನು ತಮ್ಮದೆಂದು ಹಾಗೂ ಮೇಲ್ಕಂಡ ಅಪರಾಧದಂತೆ ವಾಹನವು ಬಾಗಿಯಾಗಿಲ್ಲವೆಂದು ತಮ್ಮ ಪರ ಸಾಬೀತುಗೊಳಿಸಿಕೊಳ್ಳುವಂತಹ ಯಾವುದೇ ಅಹವಾಲನ್ನು ಮಾಡಲು ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಇನ್ನು ಹೆಚ್ಚಿನ ಸಮಯ ಕಾಯುವುದು ಸೂಕ್ತವಲ್ಲವೆಂದು ಪರಿಗಣಿಸಿ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ವಾಹನ ಸಂಖ್ಯೆ:KA-04-MF-5220 ಹಾಗೂ 20 ರಕ್ತ ಚಂದನ ಮರದ ತುಂಡುಗಳನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಎ)ರ ವ್ಯಾಪ್ತಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುವುದು ಸೂಕ್ತವಾಗಿರುತ್ತದೆ ಎಂದು ಪರಿಗಣಿಸಲಾಯಿತು.

9. ಸರ್ಕಾರದ ಪರ ತನಿಖಾಧಿಕಾರಿಗಳು ಹಾಜರು ಪಡಿಸಿರುವ ವರದಿಗಳ ಆಧಾರದ ಮೇಲೆ, ಅಮಾನತ್ತು ಪಡಿಸಿಕೊಂಡ ಇನೋವಾ ವಾಹನದ ನೊಂದಣಿ ಸಂಖ್ಯೆ KA-04-MF-5220 ರಲ್ಲಿ ಅಕ್ರಮವಾಗಿ ಒಟ್ಟು 661 ಕೆ.ಜಿ ತೂಕವುಳ್ಳ 20 ರಕ್ತ ಚಂದನ ಮರದ ತುಂಡುಗಳನ್ನು ಸಾಗಣೆ ಮಾಡುತ್ತಿದ್ದ ರಕ್ತ ಚಂದನ ಅರಣ್ಯೋತ್ಪನ್ನದ ಮಾಲೀಕತ್ವವನ್ನು ಸಾಬೀತುಪಡಿಸುವ ಅಥವಾ ಜಪ್ತಾದ ವಾಹನವು ಸದರಿ ಕೃತ್ಯದಲ್ಲಿ ಭಾಗಿಯಾಗಿಲ್ಲವೆಂದು ಅಲ್ಲಗಳೆಯಲು ವಾಹನದ ನೋಂದಣಿ ಮಾಲೀಕರು ಅಥವಾ ಅವರ ಪರ ವಕೀಲರಿಗೆ ಸಾಕಷ್ಟು ಅವಕಾಶಗಳನ್ನು ನೀಡಿದ್ದರೂ ಸಹ ಈ ನ್ಯಾಯಾಲಯದ ಮುಂದೆ ಹಾಜರಾಗದೇ ಇರುವುದರಿಂದ ಸದರಿ ವಾಹನವು ಅರಣ್ಯೋತ್ಪನ್ನದ ಅಕ್ರಮ ಸಾಗಾಣಿಕೆಯಲ್ಲಿ ಭಾಗಿಯಾಗಿರುವುದಾಗಿ ಈ ನ್ಯಾಯಾಲಯಕ್ಕೆ ಮನದಟ್ಟಾಗಿರುತ್ತದೆ ಹಾಗೂ ಪ್ರಕರಣವು ತುಂಬ ಹಳೆಯ ಪ್ರಕರಣವಾದ್ದರಿಂದ, ಅಮಾನತ್ತು ಪಡಿಸಿಕೊಂಡ ವಾಹನವು ಶಿಥಿಲವಾಗಿ ವಾಹನದ ಮೌಲ್ಯವನ್ನು ಕಳೆದುಕೊಳ್ಳುವ ಕಾರಣದಿಂದಾಗಿ ಹಾಗೂ ಜಪ್ತಾದ ರಕ್ತ ಚಂದನವು ಅರಣ್ಯ ಉತ್ಪನ್ನವಾದ ಕಾರಣ ಮೇಲ್ಕಂಡ 1 ರಿಂದ 4 ಅಂಶಗಳು ಸಕಾರಾತ್ಮಕವಾದವುಗಳಾಗಿದ್ದು, ಮೇಲ್ಕಂಡ ವಾಹನವು ಕರ್ನಾಟಕ ಅರಣ್ಯ ಕಾಯ್ದೆ 1963 ಹಾಗೂ ಕರ್ನಾಟಕ ಅರಣ್ಯ ನಿಯಮ 1969ರ ಉಲ್ಲಂಘನೆ ಮಾಡಿರುವುದು ಅಭಿಯೋಜನೆ ಪರ ತನಿಖಾಧಿಕಾರಿಗಳು ಸಲ್ಲಿಸಿರುವ ವರದಿಗಳಿಂದಾಗಿ ಸಂಶಯಾತೀತವಾಗಿ ಸಾಬೀತಾಗಿರುತ್ತದೆ.

10. ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ (1) ಮೇರೆಗೆ ಅರಣ್ಯೋತ್ಪನ್ನವಾದ ರಕ್ತ ಚಂದನ ಮರದ ಒಟ್ಟು 661 ಕೆ.ಜಿ ತೂಕವುಳ್ಳ 20 ತುಂಡುಗಳನ್ನು ಇನೋವಾ ವಾಹನದ ನೊಂದಣಿ ಸಂಖ್ಯೆ KA-04-MF-5220 ರಲ್ಲಿ ಪರವಾನಗಿ ಇಲ್ಲದೆ ಸಾಗಿಸಿ ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ 24,62,80 ಕರ್ನಾಟಕ ಅರಣ್ಯ ನಿಯಮ- 1969 ರ ಕಲಂ 144,145 ಜೊತೆಗೆ ಭಾರತೀಯ ದಂಡ ಸಂಹಿತೆ 1860ರ ಕಲಂ 379 ರ ಉಲ್ಲಂಘನೆ ಮಾಡಿರುವ ಕಾರಣಕ್ಕೆ ಸೂಲಿಬೆಲೆ ಪೋಲೀಸ್ ಠಾಣೆ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು ಜಪ್ತಾದ ಮುದ್ದೆಮಾಲನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಹಾಜರುಪಡಿಸಿದ್ದು, ಅಂತಹ ಸ್ವತ್ತನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕಾನೂನಿನಡಿ ಅವಕಾಶವಿರುವ ಮೇರೆಗೆ ಸದರಿ ಪ್ರಕರಣದಲ್ಲಿ ಒಳಗೊಂಡಿರುವ ರಕ್ತ ಚಂದನ ಮರದ ತುಂಡುಗಳನ್ನು ಹಾಗೂ ವಾಹನವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುತ್ತದೆಯೆಂದು ಮನಗಂಡು ಈ ಕೆಳಕಂಡಂತೆ;

ಆದೇಶ

ನಾನು ಡಾ. ಸಂತೋಷ ಕುಮಾರ್ ಜಿ., ಭಾ.ಅ.ಸೇ, ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ, ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71ಎ ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ (ಸೂಲಿಬೆಲೆ ಪೊಲೀಸ್ ಠಾಣೆ ಕ್ರೈಂ ನಂ. 92/2019 ದಿ:28.09.2019) ರಲ್ಲಿ ಒಳಗೊಂಡಿರುವ ಇನೋವಾ ವಾಹನದ ನೊಂದಣಿ ಸಂಖ್ಯೆ KA-04-MF-5220 ವಾಹನ ಹಾಗೂ ಒಟ್ಟು 661 ಕೆ.ಜಿ ತೂಕವುಳ್ಳ 20 ರಕ್ತ ಚಂದನ ಮರದ ತುಂಡುಗಳನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಈ ಮೂಲಕ ಆದೇಶಿಸುತ್ತೇನೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟಿದ್ದು, ಅವರು ಬೆರಳಚ್ಚಿಸಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ:27-04-2026 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಲಾಗಿದೆ.

`ಈ ಆದೇಶವು ರಾಜ್ಯಪತ್ರದಲ್ಲಿ ಪ್ರಕಟಗೊಂಡ 30 ದಿವಸಗಳ ನಂತರ ಜಾರಿಗೆ ಬರುತ್ತದೆ.

ಅಧಿಕೃತ ಅಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ಗ್ರಾಮಾಂತರ ವಿಭಾಗ,
ದೇವನಹಳ್ಳಿ,

PR-681

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ

ಅನುಗೊಂಡನಹಳ್ಳಿ ಪೊಲೀಸ್ ಠಾಣೆಯ ಕ್ರೈಂ ನಂ.105/2019 ದಿನಾಂಕ: 13.11.2019
ಡಿ.ಎಫ್.ಓ.ಸಿ ಸಂಖ್ಯೆ:21/2019

ಉಪಸ್ಥಿತರು : ಡಾ. ಸಂತೋಷ್ ಕುಮಾರ್.ಜಿ ಭಾ.ಅ.ಸೇ.. ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ.

ಪಿರ್ಯಾದಿ : ಆರಕ್ಷಕ ಉಪ ನಿರೀಕ್ಷಕರು (ಕಾ&ಸು), ಅನುಗೊಂಡನಹಳ್ಳಿ ಪೊಲೀಸ್ ಠಾಣೆ, ಹೊಸಕೋಟೆ ತಾಲ್ಲೂಕು. (ಇವರ ಪರ ಸರ್ಕಾರದ ಕಾನೂನು ಅಧಿಕಾರಿ ಕಿರಿಯ ರವರು)

ಎದುರುದಾರರು: 1) ಶ್ರೀ ಶೇಖ್ ನೂರ್ ಅಹಮ್ಮದ್ ಬಿನ್ ಶೇಖ್ ನಿಸ್ಸಾರ್ ಅಹಮ್ಮದ್, 40 ವರ್ಷ ಡ್ರೈವರ್ ಕೆಲಸ, ಮುಸ್ಲಿಂ ಜನಾಂಗ ಲೂದ್ದಿಪಲ್ಲಿ ಗ್ರಾಮ, ಓರ್ವಕಲ್ ಮಂಡಲ, ಕರ್ನೂಲ್ ತಾಲ್ಲೂಕು & ಜಿಲ್ಲೆ.

2) Sri. Pinjari Mahaboob Hussain S/o Padda Pakkira, 83.31 Shareen nagar Kurnool, Karnool Andhra Pradesh-518002

****

ಪ್ರಕರಣದ ಮುಖ್ಯಾಂಶಗಳು:-

1. ದಿನಾಂಕ:13/11/2019 ರಂದು ಶ್ರೀ. ಗೋವಿಂದ ಬಿ.ಎಂ, ಆರಕ್ಷಕ ಉಪ ನಿರೀಕ್ಷಕರು, ಕಾ&ಸು ಅನುಗೊಂಡನಹಳ್ಳಿ ಪೊಲೀಸ್ ಠಾಣೆ ರವರು ಹಾಜರುಪಡಿಸಿದ ವರದಿಯಲ್ಲಿ "ಈ ದಿವಸ ನಾನು ಬೆಳಿಗ್ಗೆ 9:30 ಗಂಟೆಗೆ ಗಸ್ತು ಮಾಡಲು ನಾನು ಮತ್ತು ಠಾಣಾ ಸಿಬ್ಬಂದಿಗಳೊಂದಿಗೆ ಇಲಾಖಾ ಜೀಪಿನಲ್ಲಿ ದೊಡ್ಡದುನ್ನಸಂದ್ರ ಮಾರ್ಗವಾಗಿ ಹೋಗಿ ಬೆಳಿಗ್ಗೆ 10-00 ಗಂಟೆಯಲ್ಲಿ ಡಿ.ಹೊಸಹಳ್ಳಿ ಮೇಡಿಮಲ್ಲಸಂದ್ರ ಕಡೆಗೆ ಹೋಗುವ ವಾಹನಗಳನ್ನು ತಪಾಸಣೆ ಮಾಡುತ್ತಿದ್ದು, ತಪಾಸಣೆ ಮಾಡುವ ಸ್ಥಳದಿಂದ ಸುಮಾರು 50 ಅಡಿ ದೂರದಲ್ಲಿ ಒಂದು ಬಿಳಿ ಬಣ್ಣದ ಬೊಲೇರೋ ವಾಹನದ ಚಾಲಕ ತನ್ನ ವಾಹನವನ್ನು ಓಡಿಸಿಕೊಂಡು ಬಂದು ನಿಲ್ಲಿಸಿದ; ವಾಹನ ತಪಾಸಣೆ ಮಾಡುತ್ತಿದ್ದ ನಾವು ಬೊಲೇರೋ ವಾಹನದ ಮೇಲೆ ಅನುಮಾನ ಬಂದು ನಾನು ಮತ್ತು ಸಿಬ್ಬಂದಿಯವರು ಹತ್ತಿರ ಹೋಗುತ್ತಿದ್ದಂತೆ

ಸಮವಸ್ತ್ರದಲ್ಲಿದ್ದ ನಮ್ಮನ್ನು ಕಂಡು ಬೊಲೇರೋ ವಾಹನದಲ್ಲಿದ್ದ ಒಬ್ಬ ಆಸಾಮಿ ಬೊಲೋರೋ ವಾಹನದ ಡೋರ್ ತೆಗೆದು ಓಡಿಹೋಗಿದ್ದು, ಬೊಲೇರೋ ವಾಹನದ ಚಾಲಕ ವಾಹನದಲ್ಲಿದ್ದು ಹಿಡಿದುಕೊಂಡು ಹೆಸರು ವಿಳಾಸ ತಿಳಿಯಲಾಗಿ ಶ್ರೀ ಶೇಖ್ ನೂರ್ ಅಹಮ್ಮದ್ ಬಿನ್ ಶೇಖ್ ನಿಸ್ಸಾರ್ ಅಹಮ್ಮದ್, 40 ವರ್ಷ ಡ್ರೈವರ್ ಕೆಲಸ, ಮುಸ್ಲಿಂ ಜನಾಂಗ ಲೂದ್ದಿಪಲ್ಲಿ ಗ್ರಾಮ, ಓರ್ವಕಲ್ ಮಂಡಲ, ಕರ್ನೂಲ್ ತಾಲ್ಲೂಕು & ಜಿಲ್ಲೆ ಫೋನ್ ನಂ:6300214083 ಎಂದು ತಿಳಿಸಿದ್ದು ನಂತರ ಓಡಿ ಹೋದ ಆಸಾಮಿ ಹೆಸರು ವಿಳಾಸ ಕೇಳಲಾಗಿ ಶ್ರೀ ಹುಸೇನ್ @ ಪಿಂಜಾರಿ ಮೆಹಬೂಬ ಹುಸೇನ್, ಬೊಲೇರೋ ವಾಹನದ ಮಾಲೀಕ ಎಂದು ತಿಳಿಸಿರುತ್ತಾನೆ ನಂತರ ಸ್ಥಳದಲ್ಲಿದ್ದ ವಾಹನದ ನಂಬರ್ ನೋಡಲಾಗಿ AP-21-BW-3060 ಬೊಲೇರೋ ವಾಹನವಾಗಿದ್ದು, ಸದರಿ ವಾಹನವನ್ನು ಪರಿಶೀಲಿಸಲಾಗಿ, ವಾಹನದ ಡಿಕ್ಕಿಯಲ್ಲಿ 13 (ಹದಿಮೂರು) ರಕ್ತ ಚಂದನ ಮರದ ತುಂಡುಗಳಿರುತ್ತವೆ. ನಂತರ ಸದರಿ ಸ್ಥಳಕ್ಕೆ ಸಿಬ್ಬಂದಿಗಳ ಮುಖಾಂತರ ಪಂಚಾಯ್ತಿದಾರರನ್ನು ಹಾಗೂ ಪೊಲೀಸ್ ಠಾಣೆಯಿಂದ ಅಳತೆ ಟೇಪು ಮತ್ತು ತೂಕದ ಸ್ಕೇಲ್‌ನ್ನು ತರಿಸಿಕೊಂಡು ಪಂಚಾಯ್ತಿದಾರರ ಸಮಕ್ಷಮ ಸದರಿ 13 ರಕ್ತ ಚಂದನ ಮರದ ತುಂಡುಗಳಿಗೆ ಕ್ರಮವಾಗಿ ಎ.ಜಿ.ಎಸ್ 01 ರಿಂದ ಎ.ಜಿ.ಎಸ್ 13 ರವರೆಗೆ ನಂಬರ್ ಗಳನ್ನು ಕೊಟ್ಟು ಗುರುತು ಮಾಡಿ, ಸದರಿ 13 ರಕ್ತ ಚಂದನ ಮರದ ತುಂಡುಗಳನ್ನು ತೂಕ ಮಾಡಲಾಗಿದ್ದು ಒಟ್ಟು ಸುಮಾರು 349 ಕೆ.ಜಿ ಇರುತ್ತದೆ. ಸದರಿ ಬೊಲೇರೋ ವಾಹನದ ಮಾಲೀಕ ಮತ್ತು ಚಾಲಕ ಎಲ್ಲಿಂದಲೋ ರಕ್ತ ಚಂದನದ ತುಂಡುಗಳನ್ನು ತಂದು ಮಾರಾಟ ಮಾಡುವ ಉದ್ದೇಶದಿಂದ ತನ್ನ ಬೊಲೇರೋ ವಾಹನದಲ್ಲಿ ಯಾವ ಕಾಡಿನಿಂದಲೋ ಕಡಿದುಕೊಂಡು ಕಳ್ಳತನದಿಂದ ಸಾಗಿಸುತ್ತಿದ್ದುದ್ದಾಗಿ ಕಂಡು ಬಂದಿರುತ್ತೆ. ಸದರಿ 13 ರಕ್ತ ಚಂದನ ಮರದ ತುಂಡುಗಳನ್ನು ಹಾಗೂ ವಾಹನವನ್ನು ಅಮಾನತ್ತು ಪಡಿಸಿಕೊಂಡು ಬೆಳಿಗ್ಗೆ 10:30 ರಿಂದ 11:30 ಗಂಟೆಯವರೆಗೆ ಪಂಚನಾಮೆ ಬರೆದುಕೊಂಡು. ಮಧ್ಯಾಹ್ನ 12-00 ಗಂಟೆಗೆ ಠಾಣೆಗೆ ವಾಪಸ್ಸಾಗಿ ಮೇಲ್ಕಂಡ ವಾಹನ AP-21-BW-3060 ಬೊಲೇರೋ ಮತ್ತು 13 ರಕ್ತ ಚಂದನ ಮರದ ತುಂಡುಗಳ ಕುರಿತು ಕಲಂ 24, 62, 80 ಕರ್ನಾಟಕ ಅರಣ್ಯ ಕಾಯ್ದೆ-1963, ಮತ್ತು ಕರ್ನಾಟಕ ಅರಣ್ಯ ಅಧಿನಿಯಮ 1969 ರ ಕಲಂ 144, 145 ಜೊತೆಗೆ 379 ಐ.ಪಿ.ಸಿ ರೀತ್ಯಾ ಪ್ರಕರಣ ದಾಖಲಿಸುವಂತೆ ಠಾಣಾಧಿಕಾರಿಗಳು, ಅನುಗೊಂಡನಹಳ್ಳಿ ಪೊಲೀಸ್ ಠಾಣೆ ರವರಿಗೆ ಸೂಚಿಸಿ ಅಮಾನತ್ತುಪಡಿಸಿಕೊಂಡ ಮುದ್ದೆಮಾಲನ್ನು ಮುಂದಿನ ಕ್ರಮಕ್ಕಾಗಿ ಹಾಜರುಪಡಿಸಿ ನೀಡಿದ ವರದಿಯ ಮೇರೆಗೆ ಎಸ್.ಹೆಚ್.ಓ ಅನುಗೊಂಡನಹಳ್ಳಿ ಪೊಲೀಸ್ ಠಾಣೆ ಇವರು ಠಾಣಾ ಮೊಕದ್ದಮೆ ಸಂಖ್ಯೆ:105/2019 ಅನ್ನು ಕಲಂ 24, 62, 80 ಕರ್ನಾಟಕ ಅರಣ್ಯ ಕಾಯ್ದೆ-1963, ಮತ್ತು ಕರ್ನಾಟಕ ಅರಣ್ಯ ಅಧಿನಿಯಮ 1969 ರ ಕಲಂ 144, 145 ಜೊತೆಗೆ 379 ಐ.ಪಿ.ಸಿ ರೀತ್ಯಾ ಪ್ರಕರಣವನ್ನು ದಾಖಲಿಸಿರುತ್ತಾರೆ." ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963 ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಆರಕ್ಷಕ ಉಪ ನಿರೀಕ್ಷಕರು, ಅನುಗೊಂಡನಹಳ್ಳಿ ಪೊಲೀಸ್ ಠಾಣೆ ಇವರು ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ರವರಿಗೆ ವಿನಂತಿಸಿರುತ್ತಾರೆ. ಅದರಂತೆ ಅನುಗೊಂಡನಹಳ್ಳಿ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ:105/2019 ರ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಳ್ಳಲಾದ ವಾಹನದ ಸಂಖ್ಯೆ: AP-21-BW-3060 ಬೊಲೇರೋ ವಾಹನವನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 71(ಎ) ಅಡಿಯಲ್ಲಿ ಕ್ರಮ ಜರುಗಿಸಲು ಈ ನ್ಯಾಯಾಲಯದಲ್ಲಿ ವಿನಂತಿಸಿರುತ್ತಾರೆ.

2. ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾದ ವಾಹನದ ನೋಂದಣಿ ಸಂಖ್ಯೆ: AP-21-BW-3060 ಬೊಲೇರೋ ವಾಹನದ 'B' Extract , ನಂತೆ Sri. Pinjari Mahaboob Hussain S/o Padda Pakkira, 83.31 Shareen nagar Kurnool, Kurnool Andhra Pradesh-518002 ರವರ ಹೆಸರಿನಲ್ಲಿ ನೊಂದಣಿಯಾಗಿರುವುದು ಕಂಡುಬಂದಿರುತ್ತದೆ. ಅದರಂತೆ ಮಾಲೀಕರಿಗೆ ಕರ್ನಾಟಕ ಅರಣ್ಯ ಕಾಯಿದೆ 1963ರ ಕಲಂ 71(ಬಿ) ರಡಿ ಕಾರಣ ಕೇಳುವ ನೋಟೀಸನ್ನು ದಿನಾಂಕ: 10.03.2026, 26.03.2026, ಹಾಗೂ ಅಂತಿಮ ನೋಟೀಸ್ ಅನ್ನು 10.04.2026 ರಂದು ನೀಡಲಾಗಿರುತ್ತದೆ. ಆದರೆ ಸದರಿಯವರು ಯಾವುದೇ ದಿನಾಂಕಗಳಂದು ವಿಚಾರಣೆಗೆ ಹಾಜರಾಗಿರುವುದಿಲ್ಲ

3. ನ್ಯಾಯಾಲಯವು, ಅನುಗೊಂಡನಹಳ್ಳಿ ಪೊಲೀಸ್ ಠಾಣೆಯ ತನಿಖಾಧಿಕಾರಿಗಳು, ಹಾಜರು ಪಡಿಸಿರುವ ದಾಖಲಾತಿಗಳನ್ನು ಹಾಗೂ ವರದಿಯನ್ನು ಪರಿಶೀಲಿಸಿರುತ್ತದೆ. ವರದಿಗಳ ಪ್ರಕಾರ ಮೇಲ್ಕಂಡ ವಾಹನವು ಕೃತ್ಯದಲ್ಲಿ ಭಾಗಿಯಾಗಿರುವುದು ಮೇಲ್ನೋಟಕ್ಕೆ ದೃಢಪಟ್ಟ ಕಾರಣ, ಅಭಿಯೋಜನಾ ಪರ ಸಾಕ್ಷಿಗಳ ವಿಚಾರಣೆಗಾಗಿ ಶ್ರೀ ಮಧು ಕುಮಾರ್ ಬಿನ್ ಮುನಿಸಾಮ್ಮಿ ಮತ್ತು ಶ್ರೀ ಕಿಶೋರ್ ಬಿನ್ ಲಕ್ಷ್ಮಿನಾರಾಯಣ ಪಂಚಸಾಕ್ಷಿದಾರರಿಗೆ ಹಾಗೂ ಪಿರ್ಯಾದುದಾರರಾದ ಶ್ರೀ. ಗೋವಿಂದ ಆರಕ್ಷಕ ಉಪ ನಿರೀಕ್ಷಕರು, ಅನುಗೊಂಡನಹಳ್ಳಿ ಪೊಲೀಸ್ ಠಾಣೆ ರವರಿಗೆ ಸಮನ್ಸ್ ನೀಡಿ ವಿಚಾರಣೆಗಾಗಿ ನ್ಯಾಯಾಲಯಕ್ಕೆ ಹಾಜರಾಗುವಂತೆ ತಿಳಿಸಿದ್ದರೂ ಕೂಡ ಸದರಿಯವರ ಪೈಕಿ ಶ್ರೀ. ಗೋವಿಂದ ಆರಕ್ಷಕ ಉಪ ನಿರೀಕ್ಷಕರು, ಅನುಗೊಂಡನಹಳ್ಳಿ ಪೊಲೀಸ್ ಠಾಣೆ ರವರು ದಿನಾಂಕ:10.04.2026 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಸಾಕ್ಷ್ಯವನ್ನು ನೀಡಿರುತ್ತಾರೆ. ಉಳಿದ ಸಾಕ್ಷಿದಾರರಿಗೆ ಹಲವಾರು ಬಾರಿ ವಿಚಾರಣೆ ಹಾಜರಾಗುವಂತೆ ಸಮನ್ಸ್ ನೀಡಿದ್ದರೂ ಕೂಡ ಸದರಿಯವರು ಗೈರುಹಾಜರಾದ ಕಾರಣ ಸದರಿಯವರನ್ನು ವಿಚಾರಣೆಯಿಂದ ಕೈ ಬಿಡಲಾಗಿರುತ್ತದೆ. ವಾಹನದ ಮಾಲೀಕರಿಗೆ ಪುನಃ ನೋಟೀಸ್ ನೀಡಿದ್ದರೂ ಕೂಡ ಯಾವುದೇ ಪ್ರಯೋಜವಾಗುವುದಿಲ್ಲವೆಂದು ಮನಗಂಡು ಮುಂದಿನ ಕ್ರಮ ಕೈಗೊಳ್ಳಲಾಗಿರುತ್ತದೆ.

4. ಪ್ರಕರಣದ ವಾಸ್ತವಾಂಶ ಮತ್ತು ಕಾನೂನಿನ ವಸ್ತುಸ್ಥಿತಿ ಹಾಗೂ ಲಭ್ಯವಿದ್ದ ವಿಷಯ ಸಾಮಗ್ರಿಗಳನ್ನು ಗಮನಿಸಿ ಪರಿಗಣಿಸಬೇಕಾದ ಅಂಶಗಳು ಈ ಕೆಳಗಿನಂತೆ ಇರುತ್ತದೆ.

1. ಬೊಲೇರೋ ವಾಹನದ ನೋಂದಣಿ ಸಂಖ್ಯೆ: AP-21-BW-3060 ಯನ್ನು ಬಳಿಸಿ ಒಟ್ಟು 349 ಕೆ.ಜಿ ತೂಕವುಳ್ಳ ರಕ್ತ ಚಂದನ ಮರದ 13 ತುಂಡುಗಳನ್ನು ಅಕ್ರಮವಾಗಿ ಸಾಗಿಸುತ್ತಿರುವುದು ಕಾನೂನು ವಿರುದ್ಧವಾಗಿ ಅರಣ್ಯ ಕಾಯ್ದೆ ನಿಯಮಗಳನ್ನು ಉಲ್ಲಂಘಿಸಲಾಗಿದೆಯೇ?
2. ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಬಿ) (1)ರ ಪ್ರಕಾರ ವಾಹನದ ಮಾಲೀಕರಿಗೆ ಕಾರಣ ಕೇಳುವ ನೋಟೀಸ್ ನೀಡಲಾಗಿದೆಯೇ? ಹಾಗೂ ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು /ಸಮರ್ಥಿಸಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡಲಾಗಿದೆಯೇ?
3. ಪ್ರಕರಣದಲ್ಲಿ ಅಮಾನತ್ತುಪಡಿಸಿದ 349 ಕೆ.ಜಿ ತೂಕವುಳ್ಳ ರಕ್ತ ಚಂದನ ಮರದ 13 ತುಂಡುಗಳನ್ನು ಅರಣ್ಯ ಸ್ವತ್ತು ಎಂದು ಅರಣ್ಯ ಕಾಯ್ದೆಯಡಿ 'ಸರ್ಕಾರಕ್ಕೆ' ಸೇರಿದ್ದು ಎಂಬುದಾಗಿ ಅಭಿಯೋಜನೆ ರುಜುವಾತು ಪಡಿಸಿದೆಯೇ?
4. ಅಮಾನತ್ತುಗೊಂಡು ವಾಹನ ಮತ್ತು ಅರಣ್ಯೋತ್ಪನ್ನ ಸರ್ಕಾರಕ್ಕೆ 'ಮುಟ್ಟುಗೋಲು' ಹಾಕಿಕೊಳ್ಳಬಹುದೇ?
5. ಯಾವ ಆದೇಶ ಅಥವಾ ತೀರ್ಪು?

ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.
ಅಂಶ 01 ಮತ್ತು 02 : ಸಕಾರಾತ್ಮಕವಾಗಿದೆ.
ಅಂಶ 03 ಮತ್ತು 04 : ಸಕಾರಾತ್ಮಕವಾಗಿದೆ.
ಅಂಶ 05 : ಅಂತಿಮ ಆದೇಶ ಈ ಕೆಳಕಂಡ ಕಾರಣಗಳಿಗಾಗಿ

<u>ಕಾರಣಗಳು</u>

ಅಂಶ 01 ರಿಂದ 04 ಒಂದಕ್ಕೊಂದು ಪರಸ್ಪರ ಸಂಬಂಧಿಸಿದ್ದು, ಕಾರಣ ವಾಸ್ತವಾಂಶದ ಪುನರಾವರ್ತನೆಯನ್ನು ತಡೆಯಲು ಒಟ್ಟಾಗಿ ಚರ್ಚಿಸಲಾಗಿದೆ.

5. ದಿನಾಂಕ:13.11.2019 ರಂದು ಬೆಳಿಗ್ಗೆ 10-00 ಗಂಟೆಯಲ್ಲಿ ಡಿ.ಹೊಸಹಳ್ಳಿ ಮೇಡಿಮಲ್ಲಸಂದ್ರ ಕಡೇಗೆ ಹೋಗುವ ವಾಹನಗಳನ್ನು ತಪಾಸಣೆ ಮಾಡುತ್ತಿದ್ದ, ಸಮಯದಲ್ಲಿ ಒಂದು ಬಿಳಿ ಬಣ್ಣದ ಬೊಲೇರೋ ವಾಹನ ಬರುತ್ತಿದ್ದು, ಸದರಿ ವಾಹನವನ್ನು ತಡೆದು ನಿಲ್ಲಿಸಲಾಗಿ AP-21-BW-3060 ಬೊಲೇರೋ ವಾಹನವಾಗಿದ್ದು, ಸದರಿ ವಾಹನವನ್ನು ಪರಿಶೀಲಿಸಲಾಗಿ, ವಾಹನದ ಡಿಕ್ಕಿಯಲ್ಲಿ 13 (ಹದಿಮೂರು) ರಕ್ತ ಚಂದನ ಮರದ ತುಂಡುಗಳಿರುತ್ತವೆ. ಸದರಿ 13 ರಕ್ತ ಚಂದನ ಮರದ ತುಂಡುಗಳಿಗೆ ಕ್ರಮವಾಗಿ ಎ.ಜಿ.ಎಸ್ 01 ರಿಂದ ಎ.ಜಿ.ಎಸ್ 13 ರವರೆಗೆ ನಂಬರ್ ಗಳನ್ನು ಕೊಟ್ಟು ಗುರುತು ಮಾಡಿ, ಇವುಗಳ ತೂಕ ಒಟ್ಟು ಸುಮಾರು 349 ಕೆ.ಜಿ ಇರುತ್ತದೆ. ಸದರಿ ಬೊಲೇರೋ ವಾಹನದ ಮಾಲೀಕ ಮತ್ತು ಚಾಲಕ ಅಕ್ರಮವಾಗಿ ಕಳ್ಳತನದಿಂದ 13 ರಕ್ತ ಚಂದನ ಮರದ ತುಂಡುಗಳನ್ನು ಸಾಗಣೆ ಮಾಡುತ್ತಿರುವ

ಆರೋಪದ ಮೇಲೆ ಅನುಗೊಂಡನಹಳ್ಳಿ ಪೊಲೀಸ್ ಠಾಣೆಯಿಂದ ಮಾಲು ಮತ್ತು ಸಾಗಾಣಿಕೆಗೆ ಬಳಸಿದ ವಾಹನವನ್ನು ಜಪ್ತು ಪಡಿಸಿ ಪ್ರಕರಣ ದಾಖಲಿಸಿಕೊಂಡಿರುತ್ತಾರೆ. ಸರ್ಕಾರದ ಪರ ಅಮಾನತ್ತುಪಡಿಸಿರುವ ಮುದ್ದೆಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963 ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಅನುಗೊಂಡನಹಳ್ಳಿ ಪೊಲೀಸ್ ಠಾಣೆ ಇವರು ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ರವರಿಗೆ ವಿನಂತಿಸಿರುತ್ತಾರೆ. ಅದರಂತೆ ಅನುಗೊಂಡನಹಳ್ಳಿ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ:105/2019 ರ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಳ್ಳಲಾದ ಮುದ್ದೆಮಾಲನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 71(ಎ) ರಡಿ ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ವಲಯ ಅರಣ್ಯಾಧಿಕಾರಿ, ಹೊಸಕೋಟೆ ವಲಯ ರವರು ಈ ನ್ಯಾಯಾಲಯದಲ್ಲಿ ವಿನಂತಿಸಿರುತ್ತಾರೆ.

6. ಅಭಿಯೋಜನೆಯವರ ಪರ ಪ್ರಕರಣದ ಸಾಕ್ಷಿದಾರರಾದ ಶ್ರೀ. ಗೋವಿಂದ. ಬಿ.ಎಂ, ಆರಕ್ಷಕ ಉಪ ನಿರೀಕ್ಷಕರು ಅನುಗೊಂಡನಹಳ್ಳಿ ಪೊಲೀಸ್ ಠಾಣೆ (ಪ್ರಸ್ತುತ ಪೊಲೀಸ್ ನಿರೀಕ್ಷಕರು ಅನುಗೊಂಡನಹಳ್ಳಿ ಪೊಲೀಸ್ ಠಾಣೆ) ಇವರು ದಿನಾಂಕ:10.04.2026 ರಂದು ನಡೆದ ವಿಚಾರಣೆಗೆ ಸಾಕ್ಷಿದಾರರಾಗಿ ನ್ಯಾಯಾಲಯದಲ್ಲಿ ತಮ್ಮ ಸಾಕ್ಷಿ ವಿಚಾರಣೆ ವೇಳೆ ಈ ಪ್ರಕರಣದಲ್ಲಿ ನೀಡಲಾದ ವರದಿಯಲ್ಲಿ ಮತ್ತು ಪಂಚನಾಮೆಯಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, "ದಿನಾಂಕ:13.11.2019 ರಂದು ತಾನು ಅನುಗೊಂಡನಹಳ್ಳಿ ಪೊಲೀಸ್ ಠಾಣೆಯಲ್ಲಿ ಆರಕ್ಷಕ ಉಪ ನಿರೀಕ್ಷಕರಾಗಿದ್ದಾಗ, ದಿನಾಂಕ:13.11.2019 ರಂದು ಬೆಳಿಗ್ಗೆ 10-00 ಗಂಟೆಯಲ್ಲಿ ಡಿ.ಹೊಸಹಳ್ಳಿ ಮೇಡಿಮಲ್ಲಸಂದ್ರ ಕಡೇಗೆ ಹೋಗುವ ವಾಹನಗಳನ್ನು ತಪಾಸಣೆ ಮಾಡುತ್ತಿದ್ದ, ಸಮಯದಲ್ಲಿ ತಪಾಸಣೆ ಮಾಡುವ ಸ್ಥಳದಿಂದ ಸುಮಾರು 50 ಅಡಿ ದೂರದಲ್ಲಿ ಒಂದು ಬಿಳಿ ಬಣ್ಣದ ಬೊಲೇರೋ ವಾಹನದ ಚಾಲಕ ತನ್ನ ವಾಹನವನ್ನು ಓಡಿಸಿಕೊಂಡು ಬಂದು ನಿಲ್ಲಿಸಿದ ವಾಹನ ತಪಾಸಣೆ ಮಾಡುತ್ತಿದ್ದ ನಾವು ಬೊಲೇರೋ ವಾಹನದ ಮೇಲೆ ಅನುಮಾನ ಬಂದು ನಾನು ಮತ್ತು ಸಿಬ್ಬಂದಿಯವರು ಹತ್ತಿರ ಹೋಗುತ್ತಿದ್ದಂತೆ ಸಮವಸ್ತ್ರದಲ್ಲಿದ್ದ ನಮ್ಮನ್ನು ಕಂಡು ಬೊಲೇರೋ ವಾಹನದಲ್ಲಿದ್ದ ಒಬ್ಬ ಆಸಾಮಿ ಬೊಲೋರೋ ವಾಹನದ ಡೋರ್ ತೆಗೆದು ಓಡಿಹೋಗಿದ್ದು, ಬೊಲೇರೋ ವಾಹನದ ಚಾಲಕ ವಾಹನದಲ್ಲಿದ್ದು ಹಿಡಿದುಕೊಂಡು ಹೆಸರು ವಿಳಾಸ ತಿಳಿಯಲಾಗಿ ಶ್ರೀ. ಶೇಖ್ ನೂರ್ ಅಹಮ್ಮದ್ ಬಿನ್ ಶೇಖ್ ನಿಸ್ಸಾರ್ ಅಹಮ್ಮದ್, 40 ವರ್ಷ ಡ್ರೈವರ್ ಕೆಲಸ, ಮುಸ್ಲಿಂ ಜನಾಂಗ ಲೂದ್ದಿಪಲ್ಲಿ ಗ್ರಾಮ, ಓರ್ವಕಲ್ ಮಂಡಲ, ಕರ್ನೂಲ್ ತಾಲ್ಲೂಕು & ಜಿಲ್ಲೆ ಎಂದು ತಿಳಿಸಿದ್ದು ನಂತರ ಓಡಿ ಹೋದ ಆಸಾಮಿ ಹೆಸರು ವಿಳಾಸ ಕೆಳಲಾಗಿ ಶ್ರೀ ಹುಸೇನ್ @ ಪಿಂಜಾರಿ ಮೆಹಬೂಬ ಹುಸೇನ್, ಬೊಲೇರೋ ವಾಹನದ ಮಾಲೀಕ ಎಂದು ತಿಳಿಸಿರುತ್ತಾನೆ, ವಾಹನದ ಮಾಲೀಕನು ಆಂಧ್ರಪ್ರದೇಶದ ಕರ್ನೂಲ್ ತಾಲ್ಲೂಕಿನ ಯಾವುದೋ ಕಾಡಿನಿಂದ ರಕ್ತ ಚಂದನದ ಮರ ಕಡಿದು ತುಂಡುಗಳನ್ನು ಬೊಲೇರೋ ವಾಹನದಲ್ಲಿ ಹಾಕಿ ಬೆಂಗಳೂರು ಜಿಲ್ಲೆಯ ಹೊಸಕೋಟೆ ತಾಲ್ಲೂಕು ಮೇಡಿಮಲ್ಲಸಂದ್ರ ಗ್ರಾಮಕ್ಕೆ ತೆಗೆದುಕೊಂಡು ಹೋಗುವಂತೆ ಹೇಳಿರುವುದಾಗಿ ತಿಳಿಸಿರುತ್ತಾರೆ. ನಂತರ ಸ್ಥಳದಲ್ಲಿದ್ದ ವಾಹನದ ನಂಬರ್ ನೋಡಲಾಗಿ AP-21-BW-3060 ಬೊಲೇರೋ ವಾಹನವಾಗಿದ್ದು, ಸದರಿ ವಾಹನವನ್ನು ಪರಿಶೀಲಿಸಲಾಗಿ, ವಾಹನದ ಡಿಕ್ಕಿಯಲ್ಲಿ 13 (ಹದಿಮೂರು) ರಕ್ತ ಚಂದನ ಮರದ ತುಂಡುಗಳಿರುವುದು ಕಂಡುಬಂದಿರುತ್ತದೆ. ನಂತರ ಸದರಿ ಸ್ಥಳಕ್ಕೆ ಸಿಬ್ಬಂದಿಗಳ ಮುಖಾಂತರ ಪಂಚಾಯ್ತಿದಾರರನ್ನು ಹಾಗೂ ಪೊಲೀಸ್ ಠಾಣೆಯಿಂದ ಅಳತೆ ಟೇಪು ಮತ್ತು ತೂಕದ ಸ್ಕೇಲ್‌ನ್ನು ತರಿಸಿಕೊಂಡು ಪಂಚಾಯ್ತಿದಾರರ ಸಮಕ್ಷಮ ಸದರಿ 13 ರಕ್ತ ಚಂದನ ಮರದ ತುಂಡುಗಳಿಗೆ ಕ್ರಮವಾಗಿ ಎ.ಜಿ.ಎಸ್ 01 ರಿಂದ ಎ.ಜಿ.ಎಸ್ 13 ರವರೆಗೆ ನಂಬರ್ ಗಳನ್ನು ಕೊಟ್ಟು ಗುರುತು ಮಾಡಿ, ಸದರಿ 13 ರಕ್ತ ಚಂದನ ಮರದ ತುಂಡುಗಳನ್ನು ತೂಕ ಮಾಡಲಾಗಿದ್ದು ಒಟ್ಟು ಸುಮಾರು 349 ಕೆ.ಜಿ ಇರುತ್ತದೆ. ಸದರಿ ಬೊಲೇರೋ ವಾಹನದ ಮಾಲೀಕ ಮತ್ತು ಚಾಲಕ ಆಂಧ್ರಪ್ರದೇಶದ ಕರ್ನೂಲ್ ತಾಲ್ಲೂಕಿನ ಯಾವುದೋ ಕಾಡಿನಿಂದ ರಕ್ತ ಚಂದನದ ಮರ ಕಡಿದು ತುಂಡುಗಳನ್ನು ತಂದು ಮಾರಾಟ ಮಾಡುವ ಉದ್ದೇಶದಿಂದ ತನ್ನ ಬೊಲೇರೋ ವಾಹನದಲ್ಲಿ ಕಳ್ಳತನದಿಂದ ಸಾಗಿಸುತ್ತಿದ್ದುದ್ದಾಗಿ ಕಂಡು ಬಂದಿರುತ್ತೆ. ಸದರಿ 13 ರಕ್ತ ಚಂದನ ಮರದ ತುಂಡುಗಳನ್ನು ಹಾಗೂ ವಾಹನವನ್ನು ಅಮಾನತ್ತು ಪಡಿಸಿಕೊಂಡು ಬೆಳಿಗ್ಗೆ 10:30 ರಿಂದ 11:30 ಗಂಟೆಯವರೆಗೆ ಪಂಚನಾಮೆ ಬರೆದುಕೊಂಡು. ಮಧ್ಯಾಹ್ನ

12-00 ಗಂಟೆಗೆ ಠಾಣೆಗೆ ವಾಪಸ್ಸಾಗಿ ಮೇಲ್ಕಂಡ ವಾಹನ ಸಂಖ್ಯೆ AP-21-BW-3060 ಬೊಲೇರೋ ಮತ್ತು 13 ರಕ್ತ ಚಂದನ ಮರದ ತುಂಡುಗಳ ಅಕ್ರಮ ಸಾಗಾಣೆ ಕುರಿತು ಪ್ರಕರಣ ದಾಖಲಿಸುವಂತೆ ಎಸ್.ಹೆಚ್.ಓ ರವರಿಗೆ ವರದಿಯನ್ನು ನೀಡಿರುತ್ತೇನೆ. ಅದರಂತೆ ತಾನು ನೀಡಿರುವ ವರದಿಯ ಮೇರೆಗೆ ಎಸ್.ಹೆಚ್.ಓ ಅನುಗೊಂಡನಹಳ್ಳಿ ಪೊಲೀಸ್ ಠಾಣೆ ಇವರು ಠಾಣಾ ಮೊಕದ್ದಮೆ ಸಂಖ್ಯೆ:105/2019 ಅನ್ನು ಕಲಂ 24, 62, ಕರ್ನಾಟಕ ಅರಣ್ಯ ಕಾಯ್ದೆ-1963, ಮತ್ತು ಕರ್ನಾಟಕ ಅರಣ್ಯ ಅಧಿನಿಯಮ 1969 ರ ಕಲಂ 144, 145 ಜೊತೆಗೆ 379 ಐ.ಪಿ.ಸಿ ರೀತ್ಯಾ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದು ಹಾಗೂ ಈ ದಿನ ನಾನು ಸದರಿ ಪ್ರಕರಣದಲ್ಲಿ ನೀಡಿದ ನನ್ನ ವರದಿ ಮತ್ತು ಮಹಜರ್ ಪ್ರತಿಯಲ್ಲಿನ ಸಹಿಯನ್ನು ಗುರುತಿಸಿದ್ದು ಅದು ನನ್ನದೇ ಸಹಿಯಾಗಿರುತ್ತದೆಂದು" ಈ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿರುತ್ತಾರೆ.

7. ಸಾಕ್ಷಿ ವಿಚಾರಣೆಯ ವೇಳೆ ವಾಹನದ ಮಾಲೀಕರು ಗೈರು ಹಾಜರಾಗಿದ್ದು ಅಭಿಯೋಜನಪರ ನುಡಿಸಲಾದ ಸಾಕ್ಷಿಗಳನ್ನು ಪಾಟೀ ಸವಾಲು ಮಾಡಿರುವುದಿಲ್ಲ, ಒಟ್ಟು 349 ಕೆ.ಜಿ. ತೂಕದ 13 ರಕ್ತ ಚಂದನ ಮರದ ತುಂಡುಗಳನ್ನು ಅಕ್ರಮವಾಗಿ ಸಾಗಾಣಿಕೆ ಮಾಡಲು ಬಳಸಲಾಗಿದ್ದ ವಾಹನ ನೋಂದಣಿ ಸಂಖ್ಯೆ: AP-21-BW-3060 ಬೊಲೇರೋ ವಾಹನದಲ್ಲಿ ಸಾಗಾಣಿಕೆ ಮಾಡಲಾದ ಸದರಿ ಅರಣ್ಯೋತ್ಪನ್ನದ ಮಾಲೀಕತ್ವವನ್ನು ಸಾಬೀತುಪಡಿಸಲು ವಾಹನದ ಮಾಲೀಕ ಅಥವಾ ಅವರ ಪರ ವಕೀಲರು ಸಾಕ್ಷಿ ವಿಚಾರಣೆ ವೇಳೆ ವಿಫಲರಾಗಿರುತ್ತಾರೆ.

